# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 133 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 24.11.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 133 • PRGI No:KARKAN/2023/88055 • VIJAYANAGARA • 24.11.2024 • Sunday • Page:04 • Rs:2







# ಕಾಂಗ್ರೆಸ್ಸಿಗೆ ಬಲ ತುಂಬಿದ ಮತದಾರರು ಪತಿಗಿಂತ ಪತ್ನಿಗೆ ಒಲಿದ ಅಧಿಕ ಮತಗಳು

## ಸಂಡೂರು ವಿಧಾನಸಭೆ ಉಪಚುನಾವಣೆ–2024 ಕಾಂಗ್ರೆಸ್ ಅಭ್ಯರ್ಥಿ ಈ.ಅನ್ನಪೂರ್ಣ ಗೆಲುವು

## ಸಂಡೂರು ಕಾಂಗ್ರೆಸ್ ಭದ್ರಕೋಟೆ ಮತ್ತೊಮ್ಮೆ ಸಾಬೀತು | ನಾಯಕರು ಒಗ್ಗೂಡಿದರೂ ಅರಳದ ಕಮಲ

**2024ರ ಉಪಚುನಾವಣೆ: ಕಾಂಗ್ರೆಸ್ ಈ ಅನ್ನಪೂರ್ಣ ತುಕಾರಾಂ 93161 (ಶೇ.51.95) ಮತ, ಬಿಜೆಪಿ ಬಂಗಾರ ಹನುಮಂತ 83967 (ಶೇ,46.6) ಮತ**

**2023ರ ಚುನಾವಣೆ : ಕಾಂಗ್ರೆಸ್ ಈ ತುಕಾರಾಂ 85223 (ಶೇ.49.31)ಮತ, ಬಿಜೆಪಿ ಶಿಲ್ಪಾರಾಘವೇಂದ್ರ 49701 (ಶೇ.28.76), ಕೆಆರ್‌ಪಿಪಿಗೆ 31375(18.15)ಮತ**


■ ಹಂಪಿ ಟೈಮ್ಸ್ ಬಳ್ಳಾರಿ

95–ಸಂಡೂರು (ಪ.ಪಂ) ವಿಧಾನಸಭೆ ಉಪಚುನಾವಣೆಯ ಫಲಿತಾಂಶವು ಶನಿವಾರ ಹೊರಬಿದ್ದಿದ್ದು, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ.ಅನ್ನಪೂರ್ಣ ಅವರು 93,616 ಮತಗಳನ್ನು ಪಡೆದು, 9,649 ಮತಗಳ ಅಂತರದ ಗೆಲುವು ಸಾಧಿಸಿದ್ದಾರೆ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ.ಅನ್ನಪೂರ್ಣ ಅವರ ಪ್ರತಿಸ್ಪರ್ಧಿಯಾದ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿಯಾದ ಬಂಗಾರ ಹನುಮಂತ ಅವರು 83,967 ಮತಗಳನ್ನು ಪಡೆದಿದ್ದಾರೆ.

ಕರ್ನಾಟಕ ಜನತಾ ಪಕ್ಷದ ಅಂಜಿನಪ್ಪ.ಎನ್ ಅವರು 632 ಮತ ಗಳಿಸಿದರೆ, ಪಕ್ಷೇತರ ಅಭ್ಯರ್ಥಿಗಳಾದ ಟಿ.ಎಂ.ಮಾರುತಿ ಅವರು 211, ಟಿ.ಯರ್ರಿಸ್ವಾಮಿ ಅವರು ಅವರು 271 ಮತ್ತು ಎನ್.ವೆಂಕಣ್ಣ ಅವರು 461 ಮತ ಗಳಿಸಿದ್ದಾರೆ. ನೋಟಾಗೆ ಒಟ್ಟು 1,040 ಮತಗಳು ದಾಖಲಾಗಿವೆ.

ಅಂಚೆ ಮತದಾನಕ್ಕೆ ಸಂಬಂಧಿಸಿದಂತೆ ಒಟ್ಟು 20 ಮತಗಳು ಚಲಾಯಿಸಲಾಗಿದ್ದು, ಈ ಪೈಕಿ ಕಾಂಗ್ರೆಸ್‌ನ ಈ.ಅನ್ನಪೂರ್ಣ ಅವರಿಗೆ 10 ಅಂಚೆ ಮತಗಳು ಬಂದಿವೆ. ಬಿಜೆಪಿ ಅಭ್ಯರ್ಥಿ ಬಂಗಾರ ಹನುಮಂತ ಅವರಿಗೆ 06 ಮತಗಳು ಬಂದಿದ್ದು, 04 ಅಂಚೆ ಮತಗಳು ವಿವಿಧ ಕಾರಣಗಳಿಗಾಗಿ ತಿರಸ್ಕೃತಗೊಂಡವು. 253 ಮತಗಟ್ಟೆಗಳಲ್ಲಿನ ಮತಯಂತ್ರಗಳಲ್ಲಿ ದಾಖಲಾದ ಮತಗಳನ್ನು ಎಣಿಕೆ ಮಾಡಲು ಒಟ್ಟು 14 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಹೀಗಾಗಿ ಒಟ್ಟು 19 ಸುತ್ತುಗಳಲ್ಲಿ ಮತಗಳ ಎಣಿಕೆ ಕಾರ್ಯ ನಡೆಯಿತು.



>>3



ಸಂಡೂರು ಉಪ ಚುನಾವಣೆಯ ಗೆಲುವು ಕಾಂಗ್ರೆಸ್ ಪಕ್ಷದ ಗೆಲುವಾಗಿದೆ. ಸಂಡೂರು ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆ ಎಂಬುದನ್ನು ಮತದಾರರು ಮತ್ತೊಮ್ಮೆ ಸಾಬೀತು ಪಡಿಸಿ, ಆಶೀರ್ವದಿಸಿದ್ದಾರೆ.

–ಈ ಅನ್ನಪೂರ್ಣ ತುಕಾರಾಂ
ಸಂಡೂರು ಕಾಂಗ್ರೆಸ್ ವಿಜೇತ ಅಭ್ಯರ್ಥಿ



ಸಂಡೂರು ಉಪ ಚುನಾವಣೆಯಲ್ಲಿ ಮತದಾರರ ತೀರ್ಪನ್ನು ಗೌರವಿಸುತ್ತೇನೆ. ಬಿಜೆಪಿ ಸೋಲಿನ ಹೊಣೆಯನ್ನು ನಾನೇ ಹೋರುತ್ತೇನೆ. ಬಿಜೆಪಿಗೆ ಕಳೆದ ಚುನಾವಣೆಗಿಂತ ಅಧಿಕ ಮತಗಳು ಈಬಾರಿ ಬಂದಿವೆ. ಮುಂದಿನ ಚುನಾವಣೆಗಳಲ್ಲಿ ಕಮಲ ಅರಳಲಿದೆ.

– ಬಂಗಾರ ಹನುಮಂತ
ಸಂಡೂರು ಬಿಜೆಪಿ ಪರಾಜಿತ ಅಭ್ಯರ್ಥಿ

**ಮೈಕ್ರೋ ನ್ಯೂಸ್**

## ನಿಸರ್ಗದ ಬಗ್ಗೆ ಕುತೂಹಲವಿದ್ದರೆ ವಿಜ್ಞಾನಿಗಳಾಗಲು ಸಾಧ್ಯ: ವಿಜ್ಞಾನಿ ಶಿವಪ್ರಸಾದ್

ಹಂಪಿ ಟೈಮ್ಸ್ ಕೊಟ್ಟೂರು

ನಿಸರ್ಗದ ಬಗ್ಗೆ ಅರ್ಥೈಸಿಕೊಳ್ಳುವುದರ ಜೊತೆ ಕುತೂಹಲ ಗುಣ ಬೆಳೆಸಿಕೊಂಡವರು ವಿಜ್ಞಾನಿಗಳಾಗಲು ಸಾಧ್ಯ ಎಂದು ಧಾರವಾಡ ಐಐಟಿ ಪ್ರಾಧ್ಯಾಪಕ ಹಾಗೂ ವಿಜ್ಞಾನಿ ಪ್ರೊ. ಎಸ್.ಎಂ.ಶಿವಪ್ರಸಾದ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಗೊರ್ಲಿ ಶರಣಪ್ಪ ಪದವಿ ಪೂರ್ವ ಕಾಲೇಜಿನ ಸಭಾಭವನದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಹಾಗೂ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ವಿವಿಧ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಶನಿವಾರ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ 'ವಿಜ್ಞಾನ ಅರಿವು ಮತ್ತು ಜಾಗೃತಿ' ಕುರಿತು ಮಾತನಾಡಿದರು.

>>4


**ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು**
**ಇರಲಿ ಮನೆಗೊಂದು ದಿನಪತ್ರಿಕೆ**

ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು
- ಭಾಷಾ ಕೌಶಲ್ಯ ಸುಧಾರಣೆ
- ಸಾಮಾನ್ಯ ಜ್ಞಾನ ಹೆಚ್ಚಳ
- ನೈತಿಕ ಮತ್ತು ಸಾಮಾಜಿಕ ಅರಿವು
- ಮೊಬೈಲಿನಿಂದ ದೂರವಿರುವುದು
- ಓದುವ ಹವ್ಯಾಸಕ್ಕೆ ಅಡಿಪಾಯ

ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
99029 09399, 99805 59681
97407 42251, 80735 89125



**S.M.Traders & Services**
Authorised Distributor for ATLAS COPCO Portable Screw Air Compressors
for North Karnataka
Water Well and Non Water Well Applications

Atlas Copco

Grow Your Business With Us




- SMALL COMPRESSORS
- MEDIUM COMPRESSORS
- LARGE COMPRESSORS
- ELECTRIC COMPRESSORS
- HOSEPIPE
- HAND-HELD TOOLS(JACKHAMMERS)
- DUST COLLECTORS
- DE-WATERING PUMPS
- SERVICE KIT & SPARE PARTS
- TAPER/IDS DRILL RODS



10% BETTER EFFICIENCY | EASY TO OPERATE | LOW SERVICE COST
LIGHTER | 0 TO 50° C | SERVICE EFFICIENCY
EXTENDED SERVICE INTERVALS | HEAVY DUTY AIR FILTER | HIGH RESELL VALUE

9686663125 - 9686663132

Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

## ಸ್ಟುಡೆಂಟ್ ಕಾಲಂ

### ಕಚ್ಚದ ನಾಯಿ



ಒಂದು ಊರಿನಲ್ಲಿ ಬಡ ದಂಪತಿಗಳಿಗೆ ಮಗನೊಬ್ಬನಿದ್ದನು. ಅವನ ಹೆಸರು ಹರೀಶ ದಿನಾಲೂ ಅವನು ಕಾಲೇಜಿಗೆ ಓಡಾಡುತ್ತಿದ್ದನು. ಅವನು ಮನೆಯಿಂದ ಸಾಗುವ ದಾರಿಯಲ್ಲಿ ಗೌಡರ ಮನೆಯೊಂದಿತ್ತು. ಅವನು ಒಂದು ನಾಯಿಯನ್ನು ಸಾಕಿದ್ದನು ಅದರ ಹೆಸರು ಚಿಂಟು, ರಸ್ತೆಯ ಬದಿಯಲ್ಲಿ ನಿಂತಿದ್ದ ಮತ್ತೊಂದು ನಾಯಿಯನ್ನು ಕಂಡು ಚಿಂಟು ಬೊಗಳುತ್ತಿತ್ತು, ಯಾರಾದರೂ ಅವರ ಮುಂದೆ ಹೋದರೆ ಸಾಕು ವಿಪರೀತ ಬೊಗಳಿ ಕಚ್ಚಲು ಬರುವ ಭಯವನ್ನು ಹುಟ್ಟಿಸುತ್ತಿತ್ತು. ನೋಡಿದವರೆಲ್ಲಾ ಈ ನಾಯಿಯ ಕಂಡು ಭಯ ಭೀತಿಗೊಳ್ಳುತ್ತಿದ್ದರು. ಅದೇ ಸಮಯದಲ್ಲಿ ಹರೀಶ ಕಾಲೇಜಿಗೆ ಹೊರಟ್ಟಿದ್ದನು. ಈತನ್ನ ಕಂಡ ನಾಯಿ ಚೂರು ಜೋರೇ ಬೊಗಳಿತು. ಹರೀಶ ರೇಗುತ್ತಾ ಲೇ..ಲೇ.. ನಾಯಿ, ನೀನು ಗೌಡ ಹಾಕಿರುವ ಬಿಸ್ಕತ್ತು ತಿಂದು ಬೆಳಿದಿಯಾ ನನ್ನ ನೋಡಿ ಬೊಗುಳುತ್ತಿಯಾ ಎಂದು ಹೇಳುತ್ತಾ ಪಕ್ಕದಲ್ಲಿದ್ದ ಕಲ್ಲನ್ನು ತಗೆದುಕೊಂಡು ನಾಯಿಯ ಮೇಲೆ ಎಸೆಯುತ್ತಾನೆ. ಕಲ್ಲು ನಾಯಿಗೆ ತಪ್ಪಿ ಗೌಡರ ಮನೆಯ ಕಿಟಕಿ ಮೇಲೆ ಬಿದ್ದು ಗ್ಲಾಸ್ ಗೆ ತಾಕುತ್ತೆ, ಸಿಟ್ಟಿಗೆ ಬಂದ ಮನೆಯ ಯಜಮಾನ ಚಿಂಟುಗೆ ಕಚ್ಚುವಂತೆ ಹೇಳಿ ಕೈ ಬಿಡುತ್ತಾನೆ. ಹರೀಶನನ್ನು ಕಚ್ಚಲು ಚಿಂಟು ಹಟ್ಟಿಸಿಕೊಂಡು ಹೋಗುತ್ತದೆ. ಓಡಿ ಓಡಿ ಸುಸ್ತಾದ ಹರೀಶ ಆ ನಾಯಿ ಬರುತ್ತಿದಿಯಾ ಎಂದು ನೋಡಲು ಹಿಂದೆ ತಿರುಗುತ್ತಾನೆ, ಭಯದಲ್ಲಿ ಓಡುತ್ತಿರುವ ಇವನ ಮುಂದೆಯಿರುವ ಕೊಚ್ಚೆ ಗುಂಡಿಲಿ ತುಪಕ್ ಎಂದು ಬೀಳುತ್ತಾನೆ. ಗೌಡನ ಮನೆ ಕಡೆಗೆ ಚಿಂಟು ವಾಪಾಸು ಹೋಗುತ್ತದೆ. ಇವನು ಬಿದ್ದಿರುವುದನ್ನ



ಕಂಡ ಈತನ ಸ್ನೇಹಿತರು ಅವನನ್ನು ಎತ್ತಿಕೊಂಡು ಆಸ್ಪತ್ರೆಗೆ ದಾಖಲಿಸುತ್ತಾರೆ. ಆಗ ಹರೀಶನನ್ನು ನೋಡಿದ ವೈದ್ಯರು ವಿವರ ಪಡೆದು ಪರೀಕ್ಷಿಸುತ್ತಾರೆ ಕಾಲಿನ ಮೂಳೆ ಮುರಿದಿದೆ ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ಹೇಳುತ್ತಾರೆ. ಹರೀಶನಿಗೆ ಆಗ ಅನಿಸುತ್ತೆ ನನ್ನ ಪಾಡಿಗೆ ನಾನು ಹೋಗದೆ ಮೂಕ ಪ್ರಾಣಿಗೆ ತೊಂದರೆ ಕೊಟ್ಟೆ. ಅದನ್ನ ಮಾಡದೇ ಹೋಗಿದ್ದರೆ ಮೂಳೆ ಮುರಿಯುತ್ತಿರ ಲಿಲ್ಲವೆಂದು. ಮಕ್ಕಳಾದ ನಾವುಗಳು ಸಹ ನಿಸರ್ಗದಲ್ಲಿರುವ ಪ್ರತಿ ಪ್ರಾಣಿ ಪಕ್ಷಿಗೂ ತನ್ನದೆಯಾದ ರೀತಿಯಲ್ಲಿ ಬದುಕುವ ಹಕ್ಕು ಹೊಂದಿವೆ. ಪ್ರಕೃತಿಯ ಮೇಲೆ ನಮಗೆಷ್ಟು ಹಕ್ಕಿದೆಯೋ, ಅದಕ್ಕಿಂತ ಹೆಚ್ಚಿನ ಹಕ್ಕು ಅವುಗಳಿಗಿದೆ ಎಂಬುದನ್ನು ನಾವುಗಳು ತಿಳಿಯೋಣ. ನಾವುಗಳು ಪರಿಸರಕ್ಕೆ ಹಾನಿಯಾಗದಂತೆ ಬದುಕೋಣ, ಪ್ರಾಣಿಗಳು ಎಂದೂ ಹಾನಿ ಮಾಡುವುದಿಲ್ಲ.

**– ಎ ಕೆ ಹನುಮಂತ 7 ನೇ ತರಗತಿ**

ಸ.ಹಿ.ಪ್ರಾ.ಶಾಲೆ, ಟಿ ಬಸಾಪುರ, ಕೂಡ್ಲಿಗಿ ತಾ ವಿಜಯನಗರ ಜಿಲ್ಲೆ

### ಪ್ರೀತಿಯ ವಿದ್ಯಾರ್ಥಿಗಳೇ ನೀವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್** **ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.

ಇ–ಮೇಲ್:hampitimes@gmail.com

M: 94486 33038

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com

M: 94486 33038

### ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ನಕಲು ಬಿಡಿಸಿ ಸಾಮಾನ್ಯ ಪ್ರಜ್ಞೆ ಸೃಜಿಸಿ

## ಅಂಕ, ಪ್ರತಿಷ್ಠೆಗಾಗಿ ಮಕ್ಕಳ ಹೋಮ್‌ವರ್ಕ ಪೋಷಕರೇ ಮಾಡುವುದು ಮಕ್ಕಳ ಕಲಿಕೆಗೆ ಹಿನ್ನಡೆ

ಸಾಹಿತ್ಯ, ಕಲೆ ಹಾಗೂ ಜೀವನ ತಿಳುವಳಿಕೆಯು ಹುಟ್ಟಿಕೊಂಡಿದ್ದು ಪ್ರಕೃತಿಯಲ್ಲಿ ನಡೆಯುವ ರಚನಾತ್ಮಕ ಚಟುವಟಿಕೆಯಿಂದ. ಇದು ನಮ್ಮ ಲೋಕದೃಷ್ಟಿಕೋನವಾಗಿದೆ ಎಂದು ಯೋಚಿಸುವಾಗ ವಿಸ್ಮಯ, ಅಚ್ಚರಿ, ಕುತೂಹಲ, ನಿಗೂಢತೆ, ಅಜ್ಞಾನದಂತಹ ಅಭಿವ್ಯಕ್ತಿಗಳು ನಮ್ಮ ತಿಳುವಳಿಕೆಯ ಪರಿಧಿಯಲ್ಲಿ ಜನ್ಮ ಪಡೆಯುತ್ತದೆ. ನಮ್ಮ ಪರಿಸರವೇ ನಮ್ಮ ಪ್ರಜ್ಞೆಯನ್ನು ಹುಟ್ಟು ಹಾಕಿದೆ. ಮನುಷ್ಯನಲ್ಲಿ ಅಭಿವ್ಯಕ್ತವಾಗುವ ಭಾವನೆ, ಭಾಷೆ, ನಡೆ–ನುಡಿ, ಆಚಾರ–ವಿಚಾರ, ರಸಭಾವಗಳು ಪ್ರಕೃತಿಯಲ್ಲಿ ನಡೆಯುವ ಕ್ರಿಯೆಗಳಿಂದ ರೂಪ ಪಡೆದಿದೆ. ಮನುಷ್ಯ ಮುಖ್ಯವಾಗಿ ಅನುಕರಣೆಯ ನೆಲೆಯಿಂದ ಜೀವನ ಕಲೆಯನ್ನು ರೂಪಿಸಿಕೊಂಡಿದ್ದಾನೆ ಎಂದು ಕಾವ್ಯ ಮೀಮಾಂಸೆಯನ್ನು ಚರ್ಚಿಸಿದ ವಿದ್ವಾಂಸರು ಹೇಳುತ್ತಾರೆ.

ಸಾಮಾನ್ಯವಾಗಿ ಇದನ್ನೇ ನಾವು ಕ್ರಿಯಾಶೀಲತೆ ಅಂತ ಕರೆಯುವುದುಂಟು. ಜಗತ್ತಿನ ಜೀವಿಗಳಲ್ಲಿ ಈ ಕ್ರಿಯಾಶೀಲತೆಯು ಅಡಕವಾಗಿರುತ್ತದೆ. ಪಕ್ಷಿಗಳು ಗೂಡನ್ನು ರೂಪಿಸುವಾಗ ತೋರುವ ಜಾಣ್ಮೆ, ಮೀನುಗಳು ತನ್ನ ಆಹಾರವನ್ನು ಹಿಡಿಯುವಾಗ ರೂಪಿಸಿಕೊಳ್ಳುವ ತನ್ನತನದ ಕೌಶಲ, ಒಂದು ಜೀವಿಯು ಮತ್ತೊಂದನ್ನು ತನ್ನತ್ತ ಸೆಳೆಯುವುದಕ್ಕೆ ತೋರುವ ವಿಭಿನ್ನ ಧ್ವನಿ ಮತ್ತು ಆಂಗಿಕ ಚಲನೆಗಳು ಇತ್ಯಾದಿ.

ಮನುಷ್ಯನೂ ಪ್ರಾಣಿ ಪ್ರಪಂಚದ ಭಾಗವೇ ಆಗಿರುವ ಕಾರಣ



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ಅವನಲ್ಲೂ ಕ್ರಿಯಾಶೀಲತೆ ಎಂಬುವುದು ದಟ್ಟವಾಗಿಯೇ ಇತ್ತು. ಆದರೆ ಈಗ ಅದರ ಅಸ್ಮಿತೆ ಮೆಲ್ಲಗೆ ಕುಸಿಯುತ್ತಿದೆ ಇದಕ್ಕೆ ಮುಖ್ಯ ಕಾರಣ ನಾವುಗಳು ಬದುಕುತ್ತಿರುವ ಪರಿಸರ, ಬಳಸುತ್ತಿರುವ ಆಧುನಿಕ ಪರಿಕರಗಳೇ ಆಗಿವೆ. ಮಕ್ಕಳು ಲೋಕವನ್ನು ಅನುಕರಿಸುವುದಕ್ಕೆ ಶುರು ಮಾಡಿ, ಭಾಷೆಗಳೆಲ್ಲ ಕಲಿಯುವುದಕ್ಕೆ ಆರಂಭಿಸಿದಂತೆ ಏನು? ಏಕೆ? ಹೇಗೆ? ಎಂಬ ಪ್ರಶ್ನೆಗಳು ಅವರಲ್ಲಿ ಹುಟ್ಟಿಕೊಂಡು ಅದನ್ನು ತಿಳಿಯುವುದಕ್ಕೆ ಆಸಕ್ತಿಯನ್ನು ಉಂಟು ಮಾಡುತ್ತಾರೆ ಮತ್ತು ಅವರು ಬೆಳೆದಂತೆ ಅವನ



ಪರಿಸರವನ್ನು ಅರ್ಥಮಾಡಿಕೊಂಡು ಬದುಕಿನ ದಾರಿಯನ್ನು ರೂಪಿಸಿಕೊಳ್ಳುವುದು ಕಳೆದ ಐವತ್ತು ದಶಕದ ಹಿಂದೆ ದಟ್ಟವಾಗಿತ್ತು. "ನೆಲವನ್ನು ಕೈಯಲ್ಲೋ, ಕಲ್ಲಿನಲ್ಲೋ ತಟ್ಟಿ ಕುಟ್ಟಿ ಮಣ್ಣು ಹಾಕಿ ಕಡ್ಡಿ, ಕೋಲುಗಳನ್ನು ನಿಲ್ಲಿಸಿ ಮನೆಯನ್ನು ಕಟ್ಟುವುದಾಗಲಿ, ಮರದ ತುಂಡಿನಿಂದ ಬುಗುರಿ ಕೆತ್ತಿ, ದಾರ ಹುಡಿದು ಗಿರ್ರನೆ ತಿರುಗಿಸುವುದಾಗಲಿ, ಚಿಪ್ಪಿ, ಕಲ್ಲು–ಮಣ್ಣುಗಳನ್ನು ಬಳಸಿಕೊಂಡು ಅಡುಗೆ ಮಾಡಿ ಬಡಿಸಿಕೊಂಡು ಉಣ್ಣುವುದಾಗಲಿ, ಡಬ್ಬಿ–ತಟ್ಟೆ–ಕಬ್ಬಿಣದ ತುಂಡುಗಳನ್ನು ಹಿಡಿಕೊಂಡು ಕೈ ಸೋಲುವಷ್ಟು ಹೊತ್ತು ಬಡಿದು ಕುಣಿದು ಕುಪ್ಪಳಿಸುವುದಾಗಲಿ, ತೆಂಗಿನ ಗರಿ, ಅಡಕೆಯ ಹಾಲೆ, ಕೊತ್ತಲಿಗೆಯನ್ನೆಲ್ಲ ಕಟ್ಟಿಕೊಂಡು ದೈವ ಬಂದಂತೆ ಕುಣಿಯುವುದು, ಯಕ್ಷಗಾನದ ಮಹಿಷಾಸುರನಂತೆ ದಿಗಿನ ತೆಗೆಯುವುದೆಲ್ಲ" ಸಾಮಾನ್ಯವಾಗಿ ದಿನದ ಆಟಗಳಾಗಿತ್ತು ಇವೆಲ್ಲವು ಬಯಲಿನಲ್ಲಿ ಘಟಿಸಿದರೂ ನಮ್ಮೊಳಗೆ ಕ್ರಿಯಾಶೀಲತೆಯನ್ನು ಪಕ್ವವಾಗಿಸುತ್ತಿತ್ತು. ಓದುವುದು, ಬರೆಯುವುದು, ಮಾತನಾಡುವುದು, ಹಾಡು ಹಾಡುವುದು, ಚಿತ್ರ ಬಿಡಿಸುವುದೆಲ್ಲ ನಮ್ಮೊಳಗಿನ ಕಲ್ಪನೆಯ ಭಾವರೂಪಗಳೇ ಆಗಿದ್ದವು. ಇಲ್ಲಿ ನಮ್ಮ ಮೆದುಳು ಹೊಸದನ್ನು ಯೋಚಿಸುತ್ತಿತ್ತು, ನೋಡಿ ಯಥಾವತ್ತಾಗಿ ನಕಲು ಮಾಡುವುದಕ್ಕೆ ಅವಕಾಶವಿರಲಿಲ್ಲ. ಅಂತಹ ವ್ಯವಸ್ಥೆಯು ನಮ್ಮ ಪ್ರಜ್ಞೆಯ ಭಾಗವಾಗಿ ರೂಪಿಸಿಕೊಂಡಿರಲಿಲ್ಲ. ಇಲ್ಲಿ ಕ್ರಿಯಾಶೀಲತೆಯೇ ಜೀವಂತವಾಗಿ ನಮ್ಮ ಜೊತೆಯಲ್ಲಿ ನಡೆದಾಡುತಿತ್ತು ಮತ್ತು ನಮ್ಮ ಬದುಕಿನ ದಾರಿಯನ್ನು ಬಿಗುವಾಗಿ ಅರ್ಥ ಮಾಡಿಕೊಂಡು ಕಟ್ಟುವುದಕ್ಕೆ ಲೋಕಜ್ಞಾನವನ್ನು ನೀಡುತ್ತಿತ್ತು.

ಈಗ ಇಂದಿನ ಮಕ್ಕಳ ಪರಿಸರದಲ್ಲಿ ಕ್ರಿಯಾಶೀಲತೆಗಳೇ ಇಲ್ಲ. ಕಷ್ಟಪಟ್ಟು ಶೋಧಿಸಿ ಹೊಸದನ್ನು ರೂಪಿಸಬೇಕು ಅನ್ನವ ಮನೋಭಾವ ಕುಸಿಯುತ್ತ ಬಂದಿದೆ ಹೀಗೆ ಆಗುವುದಕ್ಕೆ ನಾವು ನಮ್ಮ ವ್ಯವಸ್ಥೆಯೇ ಕಾರಣವಾಗಿದೆ ಎಂಬುದು ಸತ್ಯ. ನಾನೇ ಅದೆಷ್ಟೋ ಸಾರಿ ನನ್ನ ವಿದ್ಯಾರ್ಥಿಗಳಿಗೆ ಸರಳವಾದ ವಿಷಯ ಕೊಟ್ಟು ಅರ್ಧ ಪುಟ ಬರೆಯಿರಿ ಎಂದೋ, ಚಿತ್ರವೊಂದನ್ನು ಬಿಡಿಸಿ ಎಂದೋ ಹೇಳಿದ್ದುಂಟು ಆಗೆಲ್ಲ ಸ್ವಂತವಾಗಿ ತನ್ನದೇ ಮಾತಿನಲ್ಲಿ ನಾಲ್ಕು ವಾಕ್ಯವನ್ನು ಬರೆಯುವುದಕ್ಕೆ ಸಾಧ್ಯವಾಗದೆ ಇರುವುದು ವಿದ್ಯಾರ್ಥಿಗಳ ತಿಳುವಳಿಕೆಯಾಗಿದೆ. ಕ್ರಿಯಾಶೀಲತೆಯಿಂದ ತನ್ನ ಯೋಚನೆಯಲ್ಲಿ ಬರೆಯುವ, ಹೊಸದನ್ನು ಬಿಡಿಸುವ, ಭಿನ್ನವಾಗಿ ಕಟ್ಟುವ ತಿಳುವಳಿಕೆ ಈಗಿನ ಮಕ್ಕಳಲ್ಲಿ ಇಲ್ಲ. ಬದಲಿಗೆ ಏನೇ ಇದ್ದರೂ ಮೊಬೈಲ್, ಕಂಪ್ಯೂಟರ್‌ನಲ್ಲಿ ಹುಡುಕಿ ಅದನ್ನೇ ನಕಲು ಮಾಡುವುದು ರೂಢಿಯಾಗಿ ಬಿಟ್ಟಿದೆ. ತಾಂತ್ರಿಕ ಸಾಧನಗಳು ನೀಡುವ ಮಾಹಿತಿಗಳನ್ನೇ ಇಂದಿನ ಸಮಾಜ, ಪೋಷಕರು ಪ್ರಧಾನವೆಂದು ಭಾವಿಸಿದ ಕಾರಣ ಮಕ್ಕಳೆಲ್ಲ ಅದನ್ನೇ ನೆಚ್ಚಿಕೊಂಡು ಅಪ್ಪಿಕೊಂಡಿದ್ದಾರೆ.

ಮಕ್ಕಳ ಕ್ರಿಯಾಶೀಲತೆಯನ್ನು ವೃದ್ಧಿಸುವುದಕ್ಕೆ ಶಾಲೆ–ಕಾಲೇಜಿನಲ್ಲಿ ಅನೇಕ ಮಾದರಿ ತಯಾರಿಕೆಯಂತಹ ಚಟುವಟಿಗಳನ್ನು ನೀಡಲಾಗುತ್ತದೆ. ಈ ಚಟುವಟಿಕೆಗಳಿಗೆ ಅಂಕ ನೀಡಲಾಗುತ್ತದೆ ಎಂಬ ಕಾರಣಕ್ಕೆ ಪೋಷಕರೇ ಮಾರುಕಟ್ಟೆಯಿಂದ ಪರಿಕರಗಳನ್ನು ತಂದು ಜೋಡಿಸಿ ಮಾದರಿಯನ್ನು ರೂಪಿಸಿ ಶಾಲೆಯ ಮುಟ್ಟ ತಂದು ಕೊಟ್ಟು ಹೋಗುತ್ತಿದ್ದರೆ. ಇನ್ನೂ ಕೆಲವು ತಂದೆ–ತಾಯಿಗಳು ತಮ್ಮ ಮಕ್ಕಳಿಗೆ ಮನೆಗೆ ಬರೆಯಲು ಕೊಟ್ಟ ಪಠ್ಯ ಚಟುವಟಿಕೆಗಳನ್ನು ತಾವೇ ಕುಳಿತು ಬರೆದು ಕೊಡುವ ಮೂಲಕ ಮಕ್ಕಳನ್ನು ಬೆಳೆಸುವ ನೆಲೆಯಲ್ಲಿ ನಾವು ಶ್ರಮಿಸುತ್ತಿದ್ದೇವೆ ಎಂದು ಭಾವಿಸುತ್ತಿರುವುದು ಸಾಮಾನ್ಯವಾಗಿದೆ. ಇಲ್ಲಿ ನಮಗೆ ಮಕ್ಕಳ ಪ್ರತಿಭೆ, ಕ್ರಿಯಾಶೀಲಯ ಅಭಿವ್ಯಕ್ತಿಯ ನೆಲೆಗಳು ಮುಖ್ಯ ಅನ್ನಿಸುವುದೇ ಇಲ್ಲ. ಬದಲಿಗೆ ಅಂಕ ಹಾಗೂ ಪ್ರತಿಷ್ಠೆಯೇ ಪ್ರಧಾನವಾಗಿ ಕಾಣಿಸುತ್ತದೆ. ಇದರಿಂದ ಮಕ್ಕಳು ಇಂದು ಸಾಮಾನ್ಯ ಪ್ರಜ್ಞೆಯನ್ನು ಕಳೆದುಕೊಂಡಿದ್ದಾರೆ.

ಲೋಕದ ತಿಳಿವಳಿಕೆ ಮುಖ್ಯವಾಗಿ ಮಕ್ಕಳಲ್ಲಿ ಸೃಜನವಾಗಬೇಕಾದರೆ ಅವನಲ್ಲಿ ಕ್ರಿಯಾಶೀಲತೆಗಳು ಜೀವಂತವಾಗಿರಬೇಕು ಆಗ ಮಾತ್ರ ಪರಿಪೂರ್ಣವಾದ ವ್ಯಕ್ತಿತ್ವವು ರೂಪ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಗಿಡವೊಂದಕ್ಕೆ ನೀರು, ಗೊಬ್ಬರ ಉಣ್ಣಿಸಿ ಅದರ ಬೆಳವಣಿಗೆ ಸೂಕ್ತ ಪರಿಸರವನ್ನು ಒದಗಿಸಿದಂತೆ ಮಕ್ಕಳಿಗೂ ಅವರ ಪ್ರತಿಭೆಗಳು ಕಳೆಯದಂತೆ ಲೋಕದ ತಿಳುವಳಿಕೆಯನ್ನು ಸೃಜನಾತ್ಮಕವಾಗಿ ಅವರೊಳಗೆ ಬಿಗುವಾಗಿ ತುಂಬ ಬೇಕು ಆಗ ಮಾತ್ರ ಕ್ರಿಯಾಶೀಲತೆಯು ಅವರೊಳಗೆ ನೆಲೆ ನಿಂತು ಪ್ರಖರವಾದ ವ್ಯಕ್ತಿತ್ವವನ್ನು ಕಟ್ಟುತ್ತದೆ ಮುಂದೆ ಆ ಮಗುವಿದೆ ಅದೇ ಪ್ರಧಾನ ಆಸ್ತಿಯಾಗುತ್ತದೆ.

# ಮಹಿಳೆಯರು ತವರಿಗೆ ಮರಳಲು ಕೂಡ ಹೆದರುವರು

**ಘಟನೆ ಒಂದು:** ಬೆಳ್ಳಂ ಬೆಳಗ್ಗಿನ ಜಾವವೇ ಮನೆಯ ಇತರೆಲ್ಲ ಸದಸ್ಯರಂತೆ ಸವಿನಿದ್ದೆಯಲ್ಲಿದ್ದ ಆಕೆಯನ್ನು ಪತಿ ಚಹಾ ಮಾಡಿಕೊಡಲು ಕೇಳಿದಾಗ 'ರಾತ್ರಿ ತಡವಾಗಿ ಮಲಗಿದ್ದು ನಿದ್ದೆಯ ಮಂಪರು ಇನ್ನೂ ಇಳಿದಿಲ್ಲ, ತುಸು ತಡೆಯಿರಿ' ಎಂದು ಹೇಳಿದ ಆಕೆಯ ಬೆನ್ನ ಮೇಲೆ ಜೋರಾಗಿ ಏಟು ಬಿದ್ದಾಗ ಗಡಬಡಿಸಿ ಎದ್ದಳಾಕೆ.

ಘಟನೆ 2.. ಮನೆಯ ಎಲ್ಲಾ ಕೆಲಸಗಳನ್ನು ಮುಗಿಸಿ ಅಡುಗೆ ಮಾಡಿಟ್ಟು ಮಕ್ಕಳನ್ನು ಶಾಲೆಗೆ ಕಳುಹಿಸಿ ಚಹಾ ಕುಡಿದು ತಾನು ಕೆಲಸ ಮಾಡುವ ಮನೆಗಳಿಗೆ ಓಡೋಡಿ ಬಂದು ಅವರ ಮನೆಯ ಎಲ್ಲಾ ಕೆಲಸಗಳನ್ನು ನಿರ್ವಹಿಸಿ ಅವರು ಕೊಟ್ಟ ತಿಂಡಿಯನ್ನು ತಿಂದು ಮತ್ತೊಂದು ಮನೆಗೆ ಧಾವಿಸಿ ಅಲ್ಲೂ ಕೂಡ ಕೆಲಸ ಪೂರೈಸಿ ಮಕ್ಕಳು ಮನೆಗೆ ಬರುವ ಹೊತ್ತಿಗೆ ಮನೆ ಸೇರುವ ಆಕೆ ಮಕ್ಕಳ ಯೋಗ ಕ್ಷೇಮ, ಮನೆ ಕೆಲಸದಲ್ಲಿ ಮುಳುಗಿ ತುಸು ವಿಶ್ರಾಂತಿಗೆ ಜಾರಿದರೆ ಹೆಚ್ಚು... ಆಕೆಯ ಗಂಡ ಕುಡಿಯಲು ಕಾಸು ಕೊಡು ಎಂದು ಪೀಡಿಸಿ, ಕೊಡಲು ನಿರಾಕರಿಸಿದರೆ ಆಕೆಯನ್ನು ಹೊಡೆದು ಬಡಿದು ಹಣ ಕಸಿದು ಗಡಂಗಿನೆಡೆಗೆ ಓಡುತ್ತಾನೆ.

ಘಟನೆ ಮೂರು.. ತುಸು ಹೆಚ್ಚೇ ಶಿಸ್ತನ್ನು ಬಯಸುವ ಆ ಮನೆಯ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಯಜಮಾನ ಬಯಸುವುದು ತಾನು ಒಂದು ಕಡ್ಡಿಯನ್ನು ಎತ್ತಿ ಇಡದಿದ್ದರೂ ಮನೆಯ ಎಲ್ಲಾ ವಸ್ತುಗಳು ಓರಣವಾಗಿ ಇರಬೇಕು ಮತ್ತು ಅದನ್ನು ಹೆಂಡತಿ ಮಕ್ಕಳು ನಿರ್ವಹಿಸಬೇಕು ಎಂದು. ಸ್ವಲ್ಪ ಏರುಪೇರಾದರೂ, ಅಡುಗೆಯಲ್ಲಿ ಕೊಂಚ ವ್ಯತ್ಯಾಸವಾದರೂ ಆಕೆಯ ಮುಖಕ್ಕೆ ತಟ್ಟೆಯನ್ನು ಎಸೆದು ಊಟ ಬಿಟ್ಟು ಹೊರಡುವ ಆತ ದರ್ಶಿನಿಯಲ್ಲಿ ದುಡ್ಡು ಕೊಟ್ಟು ಹೊಟ್ಟೆ ತುಂಬಿಸಿಕೊಳ್ಳುತ್ತಾನೆ ನಿಜ. ಆದರೆ ಗಂಡನನ್ನು ಉಪವಾಸ ಕಳಿಸಿದೆ ಎಂಬ ಪಾಪಪ್ರಜ್ಞೆಯಿಂದ ಹೆಂಡತಿ ನರಳಿ ಉಪವಾಸ ಇರುವಂತೆ ಮಾಡುವಲ್ಲಿ ಹಿಂದೆ ಬೀಳುವುದಿಲ್ಲ.

ಹೀಗೆ ಎಣಿಸುತ್ತಾ ಹೋದರೆ ಲಕ್ಷಾಂತರ ಘಟನೆಗಳು ನಮ್ಮ ಕಣ್ಣ ಮುಂದೆ ಪ್ರತಿ ಮನೆಯ ಒಳ ಆವರಣಗಳಲ್ಲಿ ಕಂಡುಬರುತ್ತವೆ . ವಿಪರ್ಯಾಸವೆಂದರೆ ಈ ಮೇಲಿನ ಎಲ್ಲ ಘಟನೆಗಳಲ್ಲಿ ಹೆಣ್ಣು ಮಕ್ಕಳು ತಮ್ಮನ್ನು ತಾವು ತಪ್ಪಿತಸ್ಥರು ಎಂದು ಭಾವಿಸುವುದು ಮತ್ತು ಅದಕ್ಕೆ ಪುಷ್ಟಿ ನೀಡುವಂತೆ ಮನೆಯ ಇತರ ಸದಸ್ಯರು ಆಕೆಯನ್ನು ಹೀನಾಯವಾಗಿ ಕಾಣುವುದು. ಏಕೆ ಹೀಗೆ ನಮ್ಮ ಸಮಾಜ ಹೆಣ್ಣು ಮಕ್ಕಳನ್ನು ನಡೆಸಿಕೊಳ್ಳುತ್ತದೆ ಎಂಬ ಮಿಲಿಯನ್ ಡಾಲರ್ ಪ್ರಶ್ನೆಗೆ ಸಿಗುವ ಉತ್ತರಗಳು ಹಲವಾರು.

ಪುರುಷ ಪ್ರಧಾನ ವ್ಯವಸ್ಥೆ ಇರುವ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಗಂಡಸು ಮನೆಯ ಯಜಮಾನಿಕೆಯನ್ನು ವಹಿಸಿದ್ದು ಮನೆಯ ಎಲ್ಲಾ ಆರ್ಥಿಕ ವ್ಯವಹಾರಗಳನ್ನು ನೋಡಿಕೊಳ್ಳುವ, ದುಡಿದು ತಂದು ಮನೆಯ ಖರ್ಚು ವೆಚ್ಚಗಳನ್ನು ನಿಭಾಯಿಸುವ ಮೂಲಕ ತನ್ನ ಅಧಿಪತ್ಯವನ್ನು ಸ್ಥಾಪಿಸಿದ್ದು ಮನೆಯ ಸದಸ್ಯರು ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳು ಮನೆಯ ಎಲ್ಲ ಕೆಲಸ ಕಾರ್ಯಗಳನ್ನು (ಸಂಬಳವಿಲ್ಲದೆಯೂ) ನಿರ್ವಹಿಸಿ, ಮಕ್ಕಳು ಮತ್ತು ಕುಟುಂಬದ ಎಲ್ಲರ ಯೋಗಕ್ಷೇಮವನ್ನು ನೋಡಿಕೊಂಡರೂ ಆರ್ಥಿಕವಾಗಿ ಯಾವುದೇ ರೀತಿಯ ಸಹಯೋಗ ನೀಡುತ್ತಿಲ್ಲ ಎಂಬ ಕಾರಣಕ್ಕೆ! ಮನೆಯ ಪುರುಷ ಸದಸ್ಯರಿಂದ ಹೀನಾಯವಾಗಿ ಕಾಣಲ್ಪಡುತ್ತಾರೆ.

ಗಂಡಸು ಮನೆಯ ಯಜಮಾನನಾದರೆ ಆತನ ಆಧೀನದಲ್ಲಿರುವ ಪ್ರತಿಯೊಬ್ಬರನ್ನು ತೊತ್ತಿನಂತೆ ಕಾಣುವ ಅಧಿಕಾರವನ್ನು ನಮ್ಮ ಸೋ ಕಾಲ್ಡ್ ಪುರುಷ ಪ್ರಧಾನ ವ್ಯವಸ್ಥೆ ಕಲ್ಪಿಸಿ ಕೊಟ್ಟಿದ್ದು ಇಂದಿಗೂ ಅದರ ಮುಂದುವರಿದ ಭಾಗವಾಗಿ ಪುರುಷ ಸ್ವಾಮ್ಯ ನಡೆದುಕೊಂಡು ಬರುತ್ತಿದೆ. ಎಷ್ಟೋ ಬಾರಿ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಎಸಗಿದಾಗ ಆಕೆ ಚೀರಾಡಿ, ಬೋರಾಡಿ ಅಳುತ್ತಾಳೆ. ನೋವಿನಿಂದ ನೊಂದು ಶಪಿಸಬಹುದು ಕೂಡ. ತನ್ನ ವಿರುದ್ಧದ ದೌರ್ಜನ್ಯಕ್ಕೆ ಹೋರಾಡಬಹುದು. ಪ್ರತಿಫಲವಾಗಿ ಆಕೆಗೆ ದೊರೆಯಬಹುದಾದ ಸಾಮಾಜಿಕ ಉತ್ತರ 'ಮನೆ ಎಂದ ಮೇಲೆ ಇರೋದೇ ಇಷ್ಟು, ಹೊಂದಿಕೊಂಡು ಹೋಗಬೇಕು' ಎಂದು. ಗಂಡನ ದೌರ್ಜನ್ಯಕ್ಕೆ ಸಿಲುಕಿದ ಹೆಣ್ಣು ಮಕ್ಕಳು ತಂದೆ ತಾಯಿಗಳು ನಿಸ್ಸಹಾಯಕರು ಎಂಬ ಕಾರಣಕ್ಕೆ ಮಾತ್ರವಲ್ಲದೆ ಸಾಮಾಜಿಕ ಅಪಮಾನ, ನಿಂದೆಗಳಿಗೆ ಹೆದರಿ ತವರಿಗೆ ಮರಳಲು ಕೂಡ ಹೆದರುವರು.

ಇನ್ನು ಅನೇಕ ಮಧ್ಯಮ ವರ್ಗದ ಮಹಿಳೆಯರು ತಾವು ಆರ್ಥಿಕವಾಗಿ ಸಬಲರಾಗಿದ್ದರೂ ಕೂಡ ಹೆದರುವುದು ಇದೇ ಸಾಮಾಜಿಕ ನಿಂದೆಯ ಕಾರಣಕ್ಕೆ.ರಾಜಕುಮಾರಿಯಂತೆ ತಮ್ಮ ಹೆಣ್ಣು ಮಕ್ಕಳನ್ನು ಪೋಷಿಸುವ ಪಾಲಕರು ಕೂಡ ಗಿಡುಗನ ಕೈಯಲ್ಲಿ ಗಿಳಿಯನ್ನು ಕೊಟ್ಟಂತೆ ಎಂದು ನಿಟ್ಟುಸಿರು ಬಿಡುತ್ತಾರೆಯೇ ಹೊರತು ಮಗಳಿಗೆ ಆಸರೆ, ಭಾವನಾತ್ಮಕ ಬೆಂಬಲ ನೀಡಲು ಹಿಂಜರಿಯುತ್ತಾರೆ. ಇನ್ನು ಹೆಣ್ಣುಮಕ್ಕಳೇನಾದರೂ ತಮ್ಮ ಮೇಲಿನ ದೌರ್ಜನ್ಯದ ಕುರಿತಾಗಿ ದೂರು ನೀಡಲು ಹೋದರೆ ಅವರನ್ನು ನಿಕೃಷ್ಟವಾಗಿ ಕಾಣಲಾಗುತ್ತದೆ. ಗಂಡನ ಮನೆಯಲ್ಲಿ ಬಾಳಲಾಗದವಳು ಎಂಬಂತೆ ನಡೆಸಿಕೊಳ್ಳಲಾಗುತ್ತದೆ. ಗಂಡನ ಮನೆಯಲ್ಲಿ ಗಂಜಿ ಕುಡಿದರೂ ಲೇಸು ಎಂಬ ಹಳೆಯ ಸವಕಲು ನಾಣ್ಯವನ್ನು ಚಲಾಯಿಸಲು ಪ್ರಯತ್ನಿಸಿ ಯಶಸ್ವಿಯಾಗುವ ಹಿರಿಯರು ಕೂಡ ಹೆಣ್ಣು ಮಕ್ಕಳಿಗೆ ಹೊಂದಿಕೊಂಡು ಹೋಗುವಂತೆ ಬುದ್ಧಿ ಹೇಳುತ್ತಾರೆಯೇ ಹೊರತು ಗಂಡು ಮಕ್ಕಳಿಗಲ್ಲ. ಅದರಲ್ಲೂ ದೂರು ಕೊಟ್ಟ ಹೆಣ್ಣು ಮಗಳು ವಿದ್ಯಾವಂತೆಯಾಗಿದ್ದರಂತೂ ಮುಗಿದೆ ಹೋಯಿತು... 'ಹೆಚ್ಚಿಗೆ ಕಲಿಸಬಾರದು' ಅಂತ ಹೇಳೋದು ಇದಕ್ಕೆ ಎಂದು ಸಾಮೂಹಿಕ ಷರಾ ಬರೆದುಬಿಡುತ್ತಾರೆ. ಇದಲ್ಲದರ ಪರಿಣಾಮವಾಗಿ ಹೆಣ್ಣು ಮಕ್ಕಳು ತಮ್ಮ ಮೇಲಾಗುವ ದೌರ್ಜನ್ಯವನ್ನು ತುಸು ಅತ್ತು ಕರೆದು ಒಪ್ಪಿಕೊಳ್ಳುತ್ತಾರೆ ಇಲ್ಲವೇ ಹಲ್ಲು ಮುಡಿ ಕಚ್ಚಿ ಸಹಿಸಿಕೊಳ್ಳುವುದರ ಜೊತೆ ಜೊತೆಗೆ ಇದೆಲ್ಲಾ ಬದುಕಿನಲ್ಲಿ ಸಾಮಾನ್ಯ ಎಂಬಂತೆ ಭಾವಿಸಿ ತಮ್ಮ ಸ್ವಾಭಿಮಾನವನ್ನು ಅಡುಗೆಮನೆಯ ಒಲೆಯ ಉರಿಯಲ್ಲಿ ಸುಟ್ಟು ಹಾಕುತ್ತಾರೆ.

ಪುರುಷ ಪ್ರಧಾನ ವ್ಯವಸ್ಥೆಯ ಈ ಅನಿಷ್ಟ ನಡವಳಿಕೆಯು ಶತಶತಮಾನಗಳಿಂದ ಪ್ರಪಂಚದ ಬಹುತೇಕ ಹೆಣ್ಣು ಮಕ್ಕಳನ್ನು ದೈಹಿಕವಾಗಿ, ಮಾನಸಿಕವಾಗಿ ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಕುಗ್ಗಿಸಿದ್ದು... ಸಾಕಪ್ಪ! ಈ ಹೆಣ್ಣು ಜೀವನ, ಮುಂದಿನ ಜನ್ಮ ಅಂತ ಇರುವುದಾದರೆ ಗಂಡಸಾಗಿ ಹುಟ್ಟಿಸು ಎಂದು ಅಂತರಂಗದ ಕೋಣೆಯಲ್ಲಿ ನಿಡುಸುಯ್ಯುತ್ತಾ ಕಾಣದ ದೇವರಲ್ಲಿ ಬೇಡಿಕೊಳ್ಳುವ ಮಟ್ಟಿಗೆ ಪರಿಸ್ಥಿತಿ ವಿಷಮಿಸಿದೆ ಎಂದರೆ ವ್ಯವಸ್ಥೆಯ ಲೋಪ ದೋಷಗಳ ತೀವ್ರತೆಯನ್ನು ನಾವು ಅರಿಯಬಹುದು.

ಇದನ್ನೆಲ್ಲಾ ಮನಗಂಡು 1960 ರಲ್ಲಿ ವಿಶ್ವಸಂಸ್ಥೆಯು ಮಹಿಳೆಯರ ಮೇಲೆ ಉಂಟಾಗುವ ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ,ಮಾನಸಿಕ ಆಘಾತಗಳನ್ನು ಮರೆಮಾಚಲಾಗುವ ಸಾಮಾಜಿಕ ವ್ಯವಸ್ಥೆಯ ಕುರಿತಾದ ಜಾಗೃತಿ ಪ್ರಜ್ಞೆಯನ್ನು ಜನರಲ್ಲಿ ಮೂಡಿಸುವ ಸಲುವಾಗಿ ಪ್ರತಿ ವರ್ಷ **ನವೆಂಬರ್ 25ರಂದು ಅಂತರಾಷ್ಟ್ರೀಯ ಮಹಿಳಾ ದೌರ್ಜನ್ಯ ವಿರೋಧಿ ದಿನಾಚರಣೆ**ಯನ್ನು ಆಚರಿಸಲು ಕರೆ ನೀಡಿತು.

ನಮ್ಮ ಭಾರತ ದೇಶದಲ್ಲಿ ಪ್ರತಿ 20 ನಿಮಿಷಕ್ಕೆ ಓರ್ವ ಮಹಿಳೆ ದೌರ್ಜನ್ಯಕ್ಕೆ ಒಳಗಾದರೆ, ಪ್ರತಿ 77 ನಿಮಿಷಕ್ಕೆ ಓರ್ವ ಮಹಿಳೆ ಪುರುಷ ದೌರ್ಜನ್ಯಕ್ಕೆ ಬಲಿಯಾಗುತ್ತಾಳೆ. 2005ರಲ್ಲಿ ಅನುಷ್ಠಾನಕ್ಕೆ ತಂದ ಕಾನೂನಿನಿಂದಾಗಿ ಸ್ತ್ರೀಯ ಮೇಲಿನ ಹೊಡೆತ ಬಡಿತ ಗಳಂತಹ ಪ್ರಕರಣಗಳು ಕಡಿಮೆ ಆಗಿವೆ ಎಂದು ಮೇಲ್ನೋಟಕ್ಕೆ ತೋರಿದರೂ ದೌರ್ಜನ್ಯದ ಸ್ವರೂಪ ಬದಲಾಗಿದೆ... ಮೇಲ್ನೋಟಕ್ಕೆ ಕಾಣುವ ದೌರ್ಜನ್ಯಗಳು ಕಡಿಮೆಯಾಗಿದ್ದರೂ ಆಕೆಯ ಅವಶ್ಯಕತೆ ಸೌಲಭ್ಯಗಳಿಗೆ ಕತ್ತರಿ ಹಾಕುವ, ಶೀಲವನ್ನು ಶಂಕಿಸುವ, ಅವಹೇಳನದ ಮಾತುಗಳನ್ನು ಆಡುವ ಮೂಲಕ ಆಕೆಯನ್ನು ಮಾನಸಿಕವಾಗಿ ಇಂಚಿಂಚಾಗಿ ಕೊಲ್ಲಲಾಗುತ್ತಿದೆ.

ತನ್ನ ತಾಯಿ, ಅಕ್ಕ, ಅತ್ತೆ, ಅಜ್ಜಿ ಇವರಿಗೆ ಆಗುತ್ತಿರುವ ಮಾನಸಿಕ ಮತ್ತು ಕೌಟುಂಬಿಕ ದೌರ್ಜನ್ಯಗಳನ್ನು ನೋಡುತ್ತಿರುವ ಇಂದಿನ ಹೆಣ್ಣು ಮಕ್ಕಳು ವಿವಾಹವನ್ನು ಬಂಧನ ಎಂಬಂತೆ ಪರಿಗಣಿಸುತ್ತಿದ್ದು

ಒಳ್ಳೆಯ ವಿದ್ಯಾಭ್ಯಾಸವನ್ನು ಹೊಂದಿ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿರುವ ಅವರು ವೈವಾಹಿಕ ಜೀವನಕ್ಕೆ ಕಾಲಿಡಲು ಹೆದರಿಸುತ್ತಿರುವುದು ಪರಿಸ್ಥಿತಿಯ ಗಂಭೀರತೆಯನ್ನು ತೋರುತ್ತದೆ.

ನಮ್ಮ ಭಾರತ ದೇಶದಲ್ಲಿ 2005ರಲ್ಲಿ ರೂಪುಗೊಂಡ ಕೌಟುಂಬಿಕ ದೌರ್ಜನ್ಯ ಕಾಯ್ದೆಯು ಹೆಣ್ಣು ಮಕ್ಕಳು ಮಾನಸಿಕ, ದೈಹಿಕ, ಭಾವನಾತ್ಮಕ, ಲೈಂಗಿಕ ಮತ್ತು ಆರ್ಥಿಕ ಶೋಷಣೆಗಳ ಹಿಂಸೆಯಿಂದ ಮುಕ್ತವಾಗಿ ಸ್ವಾಭಿಮಾನದ ಬದುಕನ್ನು ತಮ್ಮದಾಗಿಸಿಕೊಳ್ಳಬೇಕು ಎಂಬ ಆಶಯವನ್ನು ಹೊಂದಿದ್ದು ಪ್ರಸ್ತುತ ದಿನಮಾನಗಳಲ್ಲಿ ಈ ಕಾನೂನು ಆಶಾದಾಯಕವಾಗಿದ್ದರೂ ಪರಿಣಾಮಕಾರಿಯಾದ ಬದಲಾವಣೆ ತರಲು ಅದರ ಮೂಲ ಅನುಷ್ಠಾನದಲ್ಲಿ ಬಹಳಷ್ಟು ತೊಡಕುಗಳು ಇವೆ. ಕೇವಲ ಗಂಡ, ಅತ್ತೆ, ಮಾವ ಮಾತ್ರವಲ್ಲದೇ ಒಂದೇ ಸೂರಿನಡಿಯಲ್ಲಿ ವಾಸಿಸುತ್ತಿರುವ ಕುಟುಂಬದ ಯಾವುದೇ ಸದಸ್ಯರಿಂದ ಉಂಟಾಗುವ ತೊಂದರೆಗೆ ದೂರು ದಾಖಲಿಸುವ ಮತ್ತು ಪರಿಹಾರ ಕಂಡುಕೊಳ್ಳುವ ಅವಕಾಶ ಈ ಕಾನೂನಿನಲ್ಲಿದೆ.

ಮುಖ್ಯವಾಗಿ ಬದಲಾಗಬೇಕಾಗಿರುವುದು ಸಾಮಾಜಿಕ ಮಾನಸಿಕತೆ, ಲಿಂಗ ಸಮಾನತೆಯ ನಿಟ್ಟಿನಲ್ಲಿ ಹೆಣ್ಣು ಮಕ್ಕಳು ಕುಟುಂಬದ ಭಾಗವಾಗಿದ್ದು ಅವರಿಗೆ ಕೂಡ ಸಮಾನವಾದ ಹಕ್ಕು ಮತ್ತು ಅವಕಾಶಗಳನ್ನು ಕಾನೂನಾತ್ಮಕವಾಗಿ ಮಾತ್ರವಲ್ಲವೇ ಸಾಮಾಜಿಕವಾಗಿಯು ನೀಡಬೇಕಾದ ಅವಶ್ಯಕತೆ ಇದ್ದು ಈ ನಿಟ್ಟಿನಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಲ್ಲಿ ಯಾವುದೇ ರೀತಿಯ ಭೇದ ಭಾವವನ್ನು ಹೊಂದದೆ ಸಮಾನ ಸ್ಥಾಯಿಯಲ್ಲಿ ಕಾಣಬೇಕಾಗಿದೆ.

ಮುಖ್ಯವಾಗಿ ಮನೆಯಲ್ಲಿ ತಮ್ಮ ಗಂಡು ಮಕ್ಕಳನ್ನು ಹೆಣ್ಣು ಮಕ್ಕಳ ವಿಷಯದಲ್ಲಿ ಸಮಾನವಾಗಿ ಕಾಣುವ, ವಿಶಾಲ ಮನೋಭಾವ, ಗೌರವ ಪ್ರೀತಿ ವಿಶ್ವಾಸಗಳನ್ನು ಹೊಂದಿರುವ ಮತ್ತು ಸಂವೇದನಾಶೀಲ ನಾಗರಿಕರನ್ನಾಗಿ ಬೆಳೆಸುವ ಅವಶ್ಯಕತೆ ಇದ್ದು ಆ ನಿಟ್ಟಿನಲ್ಲಿ ಮಹಿಳೆಯರು ಯೋಚಿಸಬೇಕಾಗಿದೆ.

ಆದರೂ ನಮ್ಮ ಸುತ್ತಮುತ್ತನ ಸಮಾಜದಲ್ಲಿ ಹೆಣ್ಣು ಮಕ್ಕಳ ಮೇಲೆ ಎಲ್ಲೇ ಅನ್ಯಾಯ, ದೌರ್ಜನ್ಯಗಳು ನಡೆಯುತ್ತಿದ್ದರೆ ನಮಗ್ಯಾಕೆ ಬಿಡು ಎಂಬ ಭಾವದಿಂದ ಸುಮ್ಮನಿರದೇ, ದೌರ್ಜನ್ಯ ಮಾಡುತ್ತಿರುವ ಜನರ ಕುರಿತು ಸೂಕ್ತ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗೆ ತಲುಪಿಸುವಷ್ಟಾದರೂಹೊಣೆಗಾರಿಕೆಯನ್ನುನಾವುಹೊತ್ತುಕೊಳ್ಳೋಣ. ಪಕ್ಕದ ಮನೆಗೆ ಹತ್ತಿದ ಬೆಂಕಿ.. ನಮ್ಮ ಮನೆಗೆ ಬರಲು ಬಹಳಷ್ಟು ಸಮಯ ಬೇಕಿಲ್ಲ ಎಂಬ ಅರಿವಿನ ಪ್ರಜ್ಞೆಯನ್ನು ಹೊಂದೋಣ ಎಂಬ ಆಶಯದೊಂದಿಗೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಉಸಿರುಗಟ್ಟಿದೆ ದೆಹಲಿ



ಕಬ್ಬಿನ ತ್ಯಾಜ್ಯಕ್ಕೆ
ಬೆಂಕಿಯ ಹಚ್ಚಿ
ಓಡುವ ವಾಹನಗಳ
ಹೊಗೆಯು ಹೆಚ್ಚಿ
ಏರಿದೆ ದೆಹಲಿಯ ಮಾಲಿನ್ಯ

ಉಸಿರಾಡುವ ಉಸಿರು
ವಿಷಮಯವಾಗಿ
ಕ್ಯಾನ್ಸರ್ ಅಸ್ತಮಾ
ದೇಹದಲ್ಲಿ ಕೂಡಿ
ಮಾಡಿದೆ ದೇಹವನೆ ಮಾಲಿನ್ಯ

ಕೃಷಿಯ ತ್ಯಾಜ್ಯವ
ಕಾಂಪೋಸ್ಟ್ ಮಾಡ್ರಿ
ಡೀಸೆಲ್ ವಾಹನಗಳ
ಎಲೆಕ್ಟ್ರಿಕ್ ಮಾಡಿ
ಇಳಿಯುವುದು ಭೂಮಿಯ ಮಾಲಿನ್ಯ

ಭತ್ತದ ಹುಲ್ಲಿಗೆ ಬೆಂಕಿಯ
ಹಚ್ಚದೆ
ಗದ್ದೆಯಲಿ ಅದು ಕೊಳೆಯಲು
ಬಿಟ್ಟರೆ
ಆಗದು ವಾಯು ಮಾಲಿನ್ಯ

– ಸೋಮೇಶಪ್ಪ ಸಿ ಎನ್
ಶಿಕ್ಷಕರು ಹಿರೇಹಡಗಲಿ

# ಮನೆಗೆ ಮಕ್ಕಳೆರಡು ಸಾಕು ಚಿಕ್ಕ ಕುಟುಂಬ ಚೊಕ್ಕ ಕುಟುಂಬ

## ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಮಹೇಶ ಉಮಚಗಿ ಹೇಳಿಕೆ

■ ಹಂಪಿ ಟೈಮ್ಸ್ ಕೊಪ್ಪಳ

ಹೆಣ್ಣಾಗಲಿ ಗಂಡಾಗಲಿ ಎರಡೇ ಮಕ್ಕಳು ಸಾಕು. ಚಿಕ್ಕ ಕುಟುಂಬ ಚೊಕ್ಕ ಕುಟುಂಬವಾಗಿದೆ ಎಂದು ಕೊಪ್ಪಳ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ.ಮಹೇಶ ಉಮಚಗಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಗುರುವಾರದಂದು ಕೊಪ್ಪಳ ನಗರದ ಗವಿಮಠ ಹಿಂದುಗಡೆಯ ಕುವೆಂಪು ನಗರದ ಅಂಗನವಾಡಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಎನ್.ಎಸ್.ವಿ ಪಾಕ್ಷಿಕ" ಹಾಗೂ ನವಜಾತ ಶಿಶು ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿ ವರ್ಷ ನವಂಬರ್ 21 ರಿಂದ ಡಿಸೆಂಬರ್ 05 ರವರೆಗೆ ಎನ್.ಎಸ್.ವಿ ಪಾಕ್ಷಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಕಾರ್ಯಕ್ರಮದ ಉದ್ದೇಶ ಸಂತಾನ ನಿರೋಧ ಶಸ್ತ್ರಚಿಕಿತ್ಸೆಯಲ್ಲಿ ಪುರುಷರ ಸಹಭಾಗಿತ್ವದ ಬಗ್ಗೆ ಅರಿವು ಮೂಡಿಸಿ ಸೇವೆ ನೀಡುವುದಾಗಿದೆ. ತಾಯಿ ಮರಣ ಮತ್ತು ಶಿಶುಮರಣ ತಡೆಗಟ್ಟಲು, ಜನಸಂಖ್ಯಾ ನಿಯಂತ್ರಣದಲ್ಲಿ ತರಲು ಪುರುಷರ ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಪ್ರಮುಖವಾಗಿದೆ. ಯಾವ ಹೆಣ್ಣು ಮಕ್ಕಳಿಗೆ ಹೃದಯ ತೊಂದರೆ, ಕ್ಯಾನ್ಸರ್ ಖಾಯಿಲೆ ಹಾಗೂ ಇತರೆ ಗಂಭೀರ ಖಾಯಿಲೆಯಿಂದ ಬಳಲುತ್ತಿದ್ದರೆ, ಅಂತವರ ಪತಿಯಂದಿರರಿಗೆ ಎನ್.ಎಸ್.ವಿ ಶಸ್ತ್ರಚಿಕಿತ್ಸೆ ಮಾಡಬಹುದು. ಇದು ಸರಳ ಹಾಗೂ ಸುರಕ್ಷಿತ ವಿಧಾನವಾಗಿದೆ. ಗಾಯ ಇಲ್ಲ, ಹೊಲಿಗೆ ಇಲ್ಲ, ಚಿಕಿತ್ಸಾ ವಿಧಾನ ಕೇವಲ 05 ರಿಂದ 10 ನಿಮಿಷಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡಲಾಗುವುದು. ಈ ಶಸ್ತ್ರಚಿಕಿತ್ಸೆಯ ನಂತರ ಸಾಧರಣವಾಗಿ ಎಲ್ಲಾ ಕೆಲಸ– ಕಾರ್ಯಗಳನ್ನು ಮಾಡಬಹುದು. ಯಾವುದೇ ರೀತಿಯ ಅಡ್ಡ ಪರಿಣಾಮಗಳು ಉಂಟಾಗುವುದಿಲ್ಲ, ತಕ್ಷಣ ಮನೆಗೆ ಹೋಗಬಹುದು.



ಈ ಶಸ್ತ್ರಚಿಕಿತ್ಸೆ ನಂತರ 03 ತಿಂಗಳವರೆಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವಾಗ ಕಡ್ಡಾಯವಾಗಿ ನಿರೋಧ್ ಬಳಸಬೇಕು. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ದೊರೆಯುತ್ತವೆ. ಪ್ರತಿ ಕುಟುಂಬಕ್ಕೆ ಹೆಣ್ಣಾಗಲಿ ಗಂಡಾಗಲಿ ಎರಡೇ ಮಕ್ಕಳು ಸಾಕು. ಚಿಕ್ಕ ಕುಟುಂಬ ಚೊಕ್ಕ ಕುಟುಂಬ. ಚಿಕ್ಕ ಕುಟುಂಬ ಸುಖಿ ಕುಟುಂಬ. ಎನ್.ಎಸ್.ವಿ ಮಾಡಿಸಿಕೊಳ್ಳಿ ಉತ್ತಮ ಪತಿ ಅನಿಸಿಕೊಳ್ಳಿ. ಜನಸಂಖ್ಯೆ ಹೆಚ್ಚಳದಿಂದ ನಮ್ಮ ದೇಶದಲ್ಲಿ ಬಹಳಷ್ಟು ಸಮಸ್ಯೆಗಳು ಉಂಟಾಗುತ್ತವೆ. ಜನಸಂಖ್ಯೆ ನಿಯಂತ್ರಣಕ್ಕೆ ಸರ್ಕಾರ ಹಮ್ಮಿಕೊಂಡ ಇಂತಹ ಕಾರ್ಯಕ್ರಮಗಳಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ ಮಾತನಾಡಿ, ಹುಟ್ಟಿದ 28 ದಿನದೊಳಗಿನ ಶಿಶುವಿನ ಮರಣವನ್ನು ತಡೆಗಟ್ಟುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದಾಗಿದೆ. ನವಜಾತ ಶಿಶುವನ್ನು ಕಾಂಗರೂ ಮಾದರಿಯಲ್ಲಿ ಬೆಚ್ಚಗಿಡುವುದು, ಗಂಟೆಗೊಂದು ಬಾರಿ ತಾಯಿಯ ಎದೆಹಾಲು ನೀಡುವುದು, ಹೆರಿಗೆಯಾದ ಶಿಶುವಿಗೆ ಸೋಂಕು ಉಂಟಾಗದಂತೆ ನೋಡಿಕೊಳ್ಳುವುದಲ್ಲದೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಮಗುವನ್ನು ತಾಯಿಯ ಪಕ್ಕದಲ್ಲಿಯೇ ಮಲಗಿಸಿಕೊಳ್ಳಬೇಕು. ಮಗುವಿಗೆ ಒಕ್ಕಳಬಳ್ಳಿಗೆ ಏನನ್ನೂ ಹಚ್ಚಬಾರದು ಮತ್ತು ಮಗುವಿಗೆ ಚರ್ಮದ ಮೇಲೆ ಯಾವುದೇ ರೀತಿಯ ಬರೆ ಹಾಕಬಾರದು. ಹುಟ್ಟಿದ ಅರ್ಧಗಂಟೆಯೊಳಗೆ ಮಗುವಿಗೆ ತಾಯಿಯ ಎದೆಹಾಲು ನೀಡಬೇಕು. 06 ತಿಂಗಳವರೆಗೆ ಕೇವಲ ತಾಯಿಯ ಎದೆಹಾಲನ್ನು ಮಾತ್ರ ನೀಡಬೇಕು. ಇದರ ಬದಲಿಗೆ ಬೇರೇನೂ ನೀಡ ಬಾರದು. ಮಗುವಿಗೆ ನೀಡುವ ಎಲ್ಲಾ ಲಸಿಕೆಗಳನ್ನು ತಪ್ಪದೇ ಸರಿಯಾದ ಸಮಯಕ್ಕೆ ಹಾಕಿಸಬೇಕು. ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಕನಿಷ್ಠ 03 ವರ್ಷ ಅಂತರ ಕಾಪಾಡಲು ಕುಟುಂಬ ಕಲ್ಯಾಣ ಯೋಜನೆಯ ತಾತ್ಕಾಲಿಕ ವಿಧಾನಗಳನ್ನು ಅಳವಡಿಸಿಕೊಂಡು, ಮಕ್ಕಳ ಆರೋಗ್ಯವನ್ನು ಕಾಪಾಡಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಲೇರಿಯಾ ಲಿಂಕ್‌ವರ್ಕರ್ ಶ್ರೀನಿವಾಸ, ಉದಯ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಜಯಲಕ್ಷ್ಮೀ, ಆಶಾ ಕಾರ್ಯಕರ್ತೆ ಪೂರ್ಣಿಮಾ, ಅಂಗನವಾಡಿ ಕಾರ್ಯಾಕರ್ತೆ ಮಂಜುಳಾ ಸೇರಿದಂತೆ ಗರ್ಭಿಣಿಯರು, ಬಾಣಂತಿಯರು, ತಾಯಂದಿರು, ಕಿಶೋರಿಯರು, ನಾಗರಿಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ನ.27 ರಂದು ವಿಕಲಚೇತನರಿಗೆ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ ಆಯೋಜನೆ

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲೆಯ ವಿಕಲಚೇತನರಿಗೆ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಜಿಲ್ಲಾ ಕ್ರೀಡಾಂಗಣದಲ್ಲಿ ನ.27 ರಂದು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ವಿವರ : ವಿಕಲಚೇತನರ ವೈಯಕ್ತಿಕ ಕ್ರೀಡೆಗಳ ವಿವರ : ದೈಹಿಕ ಅಂಗವಿಕಲರಿಗೆ – ಗುಂಡು ಎಸೆತ, ಜಾವೆಲಿನ್ ಥ್ರೋ, ಬಗಲುಗೋಲು ಓಟ. ದೃಷ್ಟಿದೋಷವುಳ್ಳವರಿಗೆ – ಕ್ರೇನೇಸ್, ಗುಂಡು ಎಸೆತ. ಶ್ರವಣದೋಷವುಳ್ಳವರಿಗೆ – 100 ಮೀ ಓಟ, ಗುಂಡು ಎಸೆತ, ರಿಂಗ್ ಎಸೆತ. ಬುದ್ಧಿಮಾಂದ್ಯರಿಗೆ – ಮ್ಯೂಜಿಕಲ್ ಚೇರ್, ಚೆಂಡು ಎಸೆತ. ವಿಕಲಚೇತನರ ಗುಂಪು ಕ್ರೀಡೆಗಳು : ಕ್ರಿಕೇಟ್ (ಸಿಟ್ಟಿಂಗ್), ಕ್ರಿಕೇಟ್ (ಸ್ಟಾಂಡಿಂಗ್), ಕಬ್ಬಡ್ಡಿ. ವಿಕಲಚೇತನರ ಸಾಂಸ್ಕೃತಿಕ ಸ್ಪರ್ಧೆಗಳು ದೈಹಿಕ ಅಂಗವಿಕಲರಿಗೆ– ಜಾನಪದ ಗೀತೆ, ಭಾವಗೀತೆ. ದೃಷ್ಟಿ ದೋಷವುಳ್ಳವರಿಗೆ – ಜಾನಪದಗೀತೆ, ಭಾವಗೀತೆ. ಶ್ರವಣದೋಷವುಳ್ಳವರಿಗೆ – ಚಿತ್ರಕಲಾ ಸ್ಪರ್ಧೆ. ಬುದ್ಧಿ ಮಾಂದ್ಯರಿಗೆ – ಫ್ಯಾನ್ಸಿ ಡ್ರೆಸ್ (ವೇಷಭೂಷಣ) ಹಮ್ಮಿಕೊಳ್ಳಲಾಗಿದೆ. ಈ ಎಲ್ಲಾ ಕ್ರೀಡೆಗಳಲ್ಲಿ ಒಬ್ಬ ವ್ಯಕ್ತಿ ಒಂದರಲ್ಲಿ ಮಾತ್ರ ಭಾಗವಹಿಸಲು ಅವಕಾಶ ನೀಡಲಾಗಿದೆ. ದಿ.23/11/2024 ರಿಂದ 26/11/2024 ರವರೆಗೆ ಹೆಸರನ್ನು ನೊಂದಾಯಿಸಲು ತಾಲೂಕಿನ ವಿವಿದೋದ್ದೇಶ ಪುರ್ನವಸತಿ ಕಾರ್ಯಕರ್ತರ ಹತ್ತಿರ ನೊಂದಾಯಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

# ಡಿ.04ರಂದು ಜಿಲ್ಲಾ ಮಟ್ಟದ ಸಿರಿಧಾನ್ಯ, ಮರೆತುಹೋದ ಖಾದ್ಯಗಳ ಪಾಕಸ್ಪರ್ಧೆ

■ ಹಂಪಿ ಟೈಮ್ಸ್ ಕೊಪ್ಪಳ

ಕೃಷಿ ಇಲಾಖೆ ಮತ್ತು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವತಿಯಿಂದ ಸಿರಿಧಾನ್ಯ ಮತ್ತು ಸಾವಯವ ಅಂತರಾಷ್ಟ್ರೀಯ ವಾಣಿಜ್ಯ ಮೇಳ 2025ರ ಅಂಗವಾಗಿ ಜಿಲ್ಲಾ ಮಟ್ಟದ ಸಿರಿಧಾನ್ಯ ಮತ್ತು ಮರೆತುಹೋದ ಖಾದ್ಯಗಳ ಪಾಕ ಸ್ಪರ್ಧೆಯನ್ನು ಡಿಸೆಂಬರ್ 04ರಂದು ಬೆಳಿಗ್ಗೆ 10 ಗಂಟೆಗೆ ಕೊಪ್ಪಳ ತಾಲೂಕು ಪಂಚಾಯತ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಮಟ್ಟದ ಸಿರಿಧಾನ್ಯ ಮತ್ತು ಮರೆತುಹೋದ ಖಾದ್ಯಗಳ ಪಾಕ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು, ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶವಿದ್ದು, ಪ್ರತಿ ಸ್ಪರ್ಧಿಗೆ ಒಂದೇ ತಿನಿಸು ಅಥವಾ ಅಡುಗೆ ಸಿಹಿ, ಖಾರ ಹಾಗೂ ಮರೆತುಹೋದ ಖಾದ್ಯಗಳ ತಿನಿಸು ಮಾಡಲು ಅವಕಾಶವಿರುತ್ತದೆ.

# ಕಾಂಗ್ರೆಸ್ಸಿಗೆ ಬಲ ತುಂಬಿದ ಮತದಾರರು

ಮೊದಲ ಪುಟದಿಂದ

**ಮತ ಎಣಿಕೆ ಕೇಂದ್ರಕ್ಕೆ ಬಿಗಿ–ಬಂದೋಬಸ್ತ್:** ಮತ ಎಣಿಕೆಗಾಗಿ ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಪೊಲೀಸ್ ಬಿಗಿ ಬಂದೋಬಸ್ತ್ ವ್ಯವಸ್ಥೆಯೂ ಕೈಗೊಂಡು, ಮತ ಎಣಿಕಾ ಕೇಂದ್ರಕ್ಕೆ ಆಗಮಿಸುವವರನ್ನು ಎರಡು ಹಂತಗಳಲ್ಲಿ ತಪಾಸಣೆ ನಡೆಸಿ, ಕೇಂದ್ರಕ್ಕೆ ಪ್ರವೇಶ ಕಲ್ಪಿಸುವ ವ್ಯವಸ್ಥೆ ಮಾಡಲಾಗಿತ್ತು.

ಪೂರ್ವ ನಿಗದಿಯಂತೆ ಶನಿವಾರದಂದು ಬೆಳಿಗ್ಗೆ 7.30 ಕ್ಕೆ ಚುನಾವಣಾ ಸಾಮಾನ್ಯ ವೀಕ್ಷಕರಾದ ಡಾ.ದಿವ್ಯಾ ಎಸ್.ಅಯ್ಯರ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿಜೆ., ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಸಂಡೂರು ತಹಶೀಲ್ದಾರ ಅನಿಲ್ ಕುಮಾರ್ ಸೇರಿದಂತೆ ಚುನಾವಣಾ ಏಜೆಂಟರು ಗಳ ಹಾಗೂ ಭದ್ರತಾ ಸಿಬ್ಬಂದಿಗಳ ಸಮ್ಮುಖದಲ್ಲಿ ಸ್ಟ್ರಾಂಗ್ ರೂಂನ್ನು ತೆರೆಯಲಾಯಿತು.

ಬಳಿಕ ಮೊದಲಿಗೆ ಅಂಚೆ ಮತಪತ್ರಗಳ ಎಣಿಕೆಯನ್ನು ಪ್ರಾರಂಭಿಸಲಾಯಿತು. ನಂತರ ಭದ್ರತಾ ಕೋಣೆಯಲ್ಲಿದ್ದ ವಿದ್ಯುನ್ಮಾನ ಮತಯಂತ್ರಗಳನ್ನು ಮತ ಎಣಿಕಾ ಕೊಠಡಿಗಳಿಗೆ ಆಯಾ ಸುತ್ತು ಮತ ಎಣಿಕೆಯ ಸಂದರ್ಭದಲ್ಲಿ ಒಯ್ಯಲಾಯಿತು.

ಮತ ಎಣಿಕೆ ಪ್ರಾರಂಭವಾದ ಮೊದಲ ಸುತ್ತಿನಿಂದ ಆರು ಸುತ್ತಿನವರೆಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ.ಅನ್ನಪೂರ್ಣ ಅವರು ಸಮೀಪದ ಸ್ಪರ್ಧಿ ಬಿಜೆಪಿ ಪಕ್ಷದ ಬಂಗಾರ ಹನುಮಂತ ಅವರಿಗಿಂತಲೂ ಮತ ಗಳಿಕೆಯಲ್ಲಿ ಮುನ್ನಡೆ ಕಾಯ್ದುಕೊಂಡಿದ್ದರು.

**ಆರು ಮತ್ತು ಏಳನೇ ಸುತ್ತಿನಲ್ಲಿ ಬಿಜೆಪಿ ಮುನ್ನಡೆ:**



ಬಿಜೆಪಿ ಪಕ್ಷದ ಬಂಗಾರ ಹನುಮಂತ ಅವರು ಆರನೇ ಸುತ್ತಿನಲ್ಲಿ 253 ಮತ ಮತ್ತು ಏಳನೇ ಸುತ್ತಿನಲ್ಲಿ 867 ಮತಗಳ ಅಂತರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ.ಅನ್ನಪೂರ್ಣ ಅವರಿಗಿಂತ ಮುನ್ನಡೆ ಕಾಯ್ದುಕೊಂಡಿದ್ದರು. ನಂತರ ಉಳಿದ ಎಲ್ಲ ಸುತ್ತುಗಳಲ್ಲಿ ಈ.ಅನ್ನಪೂರ್ಣ ಅವರೇ ಮುನ್ನಡೆ ಪಡೆದರು.

ಮತ ಎಣಿಕೆ ಕಾರ್ಯವನ್ನು ಸುಗಮವಾಗಿ ಕೈಗೊಳ್ಳಲು 14+1 ಟೇಬಲ್ ಕಾಯ್ದಿರಿಸಲಾಗಿತ್ತು. ಪ್ರತಿ ಟೇಬಲ್‌ಗೆ ಒಬ್ಬರು ಎಣಿಕಾ ಮೇಲ್ವಿಚಾರಕರು, ಒಬ್ಬರು ಎಣಿಕಾ ಸಹಾಯಕರು, ಒಬ್ಬರು ಮೈಕ್ರೋ ಅಬ್ಸರ್ವರ್ಸ್‌ಗಳನ್ನು ನಿಯೋಜಿಸಲಾಗಿತ್ತು. ಸಂಡೂರು ವಿಧಾನಸಭೆ ಉಪಚುನಾವಣೆಯ ಮತ ಎಣಿಕಾ ಕಾರ್ಯಕ್ಕೆ 19 ಎಣಿಕಾ ಮೇಲ್ವಿಚಾರಕರು, 21 ಎಣಿಕಾ ಸಹಾಯಕರು ಮತ್ತು 20 ಎಣಿಕಾ ಮೈಕ್ರೋ ಅಬ್ಸರ್ವರ್ಸ್‌ಗಳನ್ನು ನೇಮಿಸಿದ್ದು, ಸಂಡೂರು ಕ್ಷೇತ್ರದ ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು, ಮತ ಎಣಿಕೆ ಸಿಬ್ಬಂದಿ ಮತ್ತು ಅಭ್ಯರ್ಥಿಗಳು ಹಾಗೂ ಚುನಾವಣಾ ಏಜೆಂಟರುಗಳು ಮತ ಎಣಿಕೆ ಕಾರ್ಯದಲ್ಲಿ ಭಾಗಿಯಾಗಿದ್ದರು.

ಮತ ಎಣಿಕಾ ಕೇಂದ್ರಕ್ಕೆ ಸಿ.ಸಿ ಕ್ಯಾಮರಾ ಅಳವಡಿಸಿ ಮತ್ತು ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಿ ಅಗತ್ಯ ಭದ್ರತೆ ನೀಡಲಾಗಿತ್ತು. ಮಾಧ್ಯಮ ಕೇಂದ್ರದ ಮೂಲಕ ಮತ ಎಣಿಕೆಯ ಪ್ರತಿ ಸುತ್ತಿನ ಮಾಹಿತಿಯನ್ನು ಜನತೆಗೆ ತಲುಪಿಸಲು ಧ್ವನಿವರ್ಧಕದ ವ್ಯವಸ್ಥೆ ಮಾಡಲಾಗಿತ್ತು.

ಮತ ಎಣಿಕೆಯ ಹಿನ್ನೆಲೆಯಲ್ಲಿ ಮತ ಎಣಿಕಾ ಕೇಂದ್ರದ ಹೊರಗಡೆ ಮತ್ತು ಒಳಗಡೆ ಸೂಕ್ತವಾದ ಪೊಲೀಸ್ ಬಂದೋಬಸ್ತ್ ವ್ಯವಸ್ತೆ ಮಾಡಲಾಗಿತ್ತು. ಮಧ್ಯಾಹ್ನದ ವೇಳೆಗೆ ಮತ ಎಣಿಕೆ ಮುಕ್ತಾಯಗೊಂಡ ನಂತರ ಸಂಡೂರು ವಿಧಾನಸಭೆಯ ಉಪಚುನಾವಣೆಯ ಚುನಾವಣಾಧಿಕಾರಿ ಅವರು ಫಲಿತಾಂಶ ಪ್ರಕಟಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ. ಅನ್ನಪೂರ್ಣಗೆ ಪ್ರಮಾಣ ಪತ್ರ ವಿತರಿಸಿದರು.



# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ — ನಿನ್ನ ಏಳಿಗೆಗೆ ನೀನೇ ಶಿಲ್ಪಿ

## ಭೂಗೋಳ ಶಾಸ್ತ್ರ ಅಧ್ಯಾಯ 26: ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

| ಖನಿಜಗಳು | ವಿಶೇಷ ಹೆಸರುಗಳು |
|---|---|
| ಬಾಕ್ಸೈಟ್ | ಅದ್ಭುತ ಲೋಹ |
| ಅಭ್ರಕ | ಕಾಗೆ ಬಂಗಾರ |
| ಪೆಟ್ರೋಲಿಯಂ | ದ್ರವರೂಪದ ಚಿನ್ನ |
| ಕಲ್ಲಿದ್ದಲು | ಕಪ್ಪು ಬಂಗಾರ |

**1. ಭಾರತದಲ್ಲಿ ಮೊಟ್ಟಮೊದಲು ಪೆಟ್ರೋಲಿಯಂ ನಿಕ್ಷೇಪ ಪತ್ತೆಯಾಗಿದ್ದು ಎಲ್ಲಿ?**
ಉತ್ತರ: ಅಸ್ಸಾಂನ ದಿಗ್ಬಾಯ್

**2. ಭಾರತದ ಅತಿ ದೊಡ್ಡ ಪೆಟ್ರೋಲಿಯಂ ತೈಲ ನಿಕ್ಷೇಪ ಯಾವುದು?**
ಉತ್ತರ: ಬಾಂಬೆ ಹೈ

**3.ಬಾಕ್ಸೈಟ್ ಅದಿರಿನಿಂದ ದೊರೆಯುವ ಲೋಹ ಯಾವುದು?**
ಉತ್ತರ: ಅಲ್ಯುಮಿನಿಯಂ ಲೋಹ

**4. ದೇಶದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುತ್ತಿರುವ ಸ್ಥಳ ಯಾವುದು?**
ಉತ್ತರ: ರಾಯಚೂರಿನ ಹಟ್ಟಿ ಚಿನ್ನದ ಗಣಿ

**5. 'ಗ್ಲೋಬಲ್ ವಾರ್ಮಿಂಗ್' ಅಥವಾ ಹಸಿರು ಮನೆಯ ಪರಿಣಾಮ ಎಂದರೇನು**
ಉತ್ತರ: ಭೂಮಿಯ ತಾಪಮಾನ ಏರಿಕೆಯನ್ನು 'ಗ್ಲೋಬಲ್ ವಾರ್ಮಿಂಗ್' ಅಥವಾ ಹಸಿರು ಮನೆಯ ಪರಿಣಾಮ ಎನ್ನುವರು.

**6. ಭಾರತದ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರ ಯಾವುದು?**
ಉತ್ತರ: ರಾಜಸ್ಥಾನದ ಬಾರ್ ಮರ್

**7. ಭಾರತದಲ್ಲಿ ಅಭ್ರಕದ ರಫ್ತು ಕಡಿಮೆಯಾಗಲು ಕಾರಣವೇನು ?**
ಉತ್ತರ: ಇಂದು ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿದ್ದು, ಇದರ ರಫ್ತು ಕಡಿಮೆಯಾಗಿದೆ.

**8. ಪೆಟ್ರೋಲಿಯಂನ್ನು "ದ್ರವರೂಪದ ಚಿನ್ನ" ಎಂದು ಕರೆಯಲಾಗಿದೆ. ಏಕೆ? (ಜೂನ್ 2024)**
ಉತ್ತರ: ಶಾಂತಿ ಮತ್ತು ಯುದ್ಧ ಕಾಲಗಳೆರಡರಲ್ಲೂ ಪೆಟ್ರೋಲಿಯಂ ಅಮೂಲ್ಯವಾಗಿರುವುದರಿಂದ 'ದ್ರವರೂಪದ ಚಿನ್ನ' ಎನ್ನುವರು

**9. ಪರಮಾಣು ಖನಿಜಗಳನ್ನು ಹೆಸರಿಸಿ.**
ಉತ್ತರ: 1. ಯುರೇನಿಯಂ 2. ಥೋರಿಯಂ 3. ಬೆರಿಲಿಯಂ 4. ಲಿಥಿಯಂ

**10. ಅಭ್ರಕದ ಮಹತ್ವವನ್ನು ತಿಳಿಸಿ.**
ಉತ್ತರ: 1. ಅಭ್ರಕವು ಒಳ್ಳೆಯ ಪಾರದರ್ಶಕತೆ, ಸ್ಥಿತಿ ಸ್ಥಾಪಕತ್ವ, ಶಾಖ ನಿರೋಧಕ ಹಾಗೂ ಹೊಳಪುಳ್ಳ ಸಿಲಿಕೇಟ್ ಖನಿಜವಾಗಿದೆ. 2. ಇದು ಶಾಖ ಮತ್ತು ವಿದ್ಯುತ್ತಿನ ಮಂದವಾಹಕವಾಗಿದೆ. 3. ಟೆಲಿಫೋನ್, ಟೆಲಿಗ್ರಾಫ್, ನಿಸ್ತಂತು ಸೇವೆ, ಗಾಜು ತಯಾರಿಕೆ, ಬಣ್ಣ ವಾರ್ನಿಷ್, ಕೃತಕ ರಬ್ಬರ್, ರಾಸಾಯನಿಕ ಕೈಗಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ


**11. ಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳು ಹಾಗೂ ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳನ್ನು ವ್ಯತ್ಯಾಸಿಸಿ.(ಏಪ್ರಿಲ್ 2023).**

| ಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳು | ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳು |
|---|---|
| ಮುಗಿದು ಹೋಗುವ ಶಕ್ತಿ ಸಂಪನ್ಮೂಲಗಳಾಗಿವೆ | ಮುಗಿದು ಹೋಗದ ಶಕ್ತಿ ಸಂಪನ್ಮೂಲಗಳು. |
| ಉದಾ: ಕಲ್ಲಿದ್ದಲು, ಪೆಟ್ರೋಲಿಯಂ, ಅಣುಶಕ್ತಿ ಖನಿಜಗಳು. | ಉದಾ: ಜಲವಿದ್ಯುತ್, ಸೌರಶಕ್ತಿ, ಪವನ ಶಕ್ತಿ, ಉಬ್ಬರ ಇಳಿತ ಶಕ್ತಿ |
| ಹಸಿರು ಮನೆಯ ಪರಿಣಾಮ ಉಂಟಾಗುತ್ತಿದೆ. | ಪುನರ್ ಬಳಕೆ ಮಾಡಬಹುದು |

**12. ಸೌರ ಶಕ್ತಿಯನ್ನು ಇಂದು ವಿವಿಧ ವಿಧಾನಗಳಲ್ಲಿ ಬಳಸಲಾಗುತ್ತಿದೆ. ಸಮರ್ಥಿಸಿ.**
ಉತ್ತರ: 1. ಸೂರ್ಯನ ಕಿರಣಗಳ ಶಾಖದ ಬಳಕೆಯನ್ನೇ 'ಸೌರಶಕ್ತಿ' ಎಂದು ಕರೆಯುವರು. 2. ಇದು ಮುಗಿಯದ ಶಕ್ತಿ ಸಂಪನ್ಮೂಲವಾಗಿದೆ. 3. ಸೌರ ಶಕ್ತಿಯನ್ನು ನೇರವಾಗಿ ಶಾಖ ಶಕ್ತಿಯನ್ನಾಗಿ ಪರಿವರ್ತಿಸ ಬಹುದು. 4. ಸೋಲಾರ್ ವಾಟರ್ ಹೀಟರ್, ಕುಕ್ಕರ್, ವಿದ್ಯುತ್ ದೀಪ, ರೈಲ್ವೆ ಸಿಗ್ನಲ್, ಬಳಸಿಕೊಳ್ಳಲಾಗುತ್ತಿದೆ.

**13. ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ಪರಿಹಾರ ಕ್ರಮಗಳಾವುವು? (ಏಪ್ರಿಲ್ 2024)**
ಉತ್ತರ: * ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವುದು * ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ, * ಬದಲಿ ಸಂಪನ್ಮೂಲಗಳನ್ನು ಬಳಸುವುದು, * ಅಸಾಂಪ್ರದಾಯಕ ಸಂಪನ್ಮೂಲಗಳ ಬಳಕೆಗೆ ಪ್ರೋತ್ಸಾಹ, * ಶಕ್ತಿ ಸಂಪನ್ಮೂಲಗಳ ಮಿತ ಬಳಕೆ * ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು.

ಭಾರತದ ಪ್ರಮುಖ ಖನಿಜ ಮತ್ತು ಶಕ್ತಿ ಸಂಪನ್ಮೂಲ ಕೇಂದ್ರಗಳು




ಸೂಚನೆ:
ನಕಾಶೆ ಬಿಡಿಸಲು 1 ಅಂಕ, ಸ್ಥಳಗಳನ್ನು ಗುರುತಿಸಲು 4 ಅಂಕ, ಒಟ್ಟು 5 ಅಂಕಗಳು ಇರುತ್ತವೆ. ಚೆನ್ನಾಗಿ ಅಭ್ಯಾಸಿಸಿ 5 ಅಂಕ ಪಡೆದುಕೊಳ್ಳಿ

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ: 99165 67120

ಸಾಯಿಮಣಿ ಪ್ರಕಾಶನ, ಹೊಸಪೇಟೆ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

**24–11–2024 – ಭಾನುವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವ ಪಾಲ್ಗುಣಿ |
| ಯೋಗ | : ವೈಧೃತಿ |
| ಕರಣ | : ತೈತುಲ |
| ಸೂರ್ಯೋದಯ | : 06:48:01 |
| ಸೂರ್ಯಾಸ್ತ | : 17:39:18 |
| ರಾಹು ಕಾಲ | : 16:18–17:39 |
| ಯಮಘಂಡ ಕಾಲ | : 12:14–13:35 |
| ಗುಳಿಕ ಕಾಲ | : 14:56–16:18 |

## ತುಂಗಭದ್ರಾ ನೀರಿನ ಮಟ್ಟ




ಶನಿವಾರ : 23–11–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.51 ಅಡಿ |
| ಒಳ ಹರಿವು | 3066 ಕ್ಯುಸೆಕ್ |
| ಹೊರ ಹರಿವು | 6246 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 96.00 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1597.62 ಅಡಿ |
| ಒಳ ಹರಿವು | 684 ಕ್ಯುಸೆಕ್ |
| ಹೊರ ಹರಿವು | 9751 ಕ್ಯುಸೆಕ್ |
| ಸಾಮರ್ಥ್ಯ | 18.608 ಟಿಎಂಸಿ |

## ಆನಂದ ಬಾಣ




# ಕಡ್ಡಿರಾಂಪುರದಲ್ಲಿ ಸಾಂಸ್ಕೃತಿಕೋತ್ಸವ ಕಲಾವಿದರಿಗೆ ಪ್ರೋತ್ಸಾಹ ಅಗತ್ಯ

### ಹಂಪಿ ಗ್ರಾಮ ಪಂಚಾಯತಿ ಪಿಡಿಓ ಗಂಗಾಧರ ಅಭಿಮತ



■ ಹಂಪಿ ಟೈಮ್ಸ್ ಹೊಸಪೇಟೆ

ಆಧುನಿಕ ತಂತ್ರಜ್ಞಾನದ ಸುಳಿಗೆ ಸಿಲುಕಿರುವ ಮಕ್ಕಳಲ್ಲಿ ಕಲೆಗಳು ಕಳೆದೋಗುತ್ತಿವೆ. ಇಂತಹ ಸಂದರ್ಭದಲ್ಲಿ ಕಡ್ಡಿರಾಂಪುರದ ಶ್ರೀ ಮರಿದೇವ ಸಂಗೀತ ಸಾಂಸ್ಕೃತಿಕ ಕಲಾವೃಂದವು ಜಾತ್ರಾ ಸಮಯದಲ್ಲೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕಲೆಗಳಿಗೆ, ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಎಂದು ಹಂಪಿ ಗ್ರಾಮ ಪಂಚಾಯತಿ ಪಿಡಿಓ ಗಂಗಾಧರ ಹೇಳಿದರು.

ತಾಲೂಕಿನ ಕಡ್ಡಿರಾಂಪುರದಲ್ಲಿ ಶ್ರೀಮರಿಸ್ವಾಮಿ ಜಾತ್ರಾ ಪ್ರಯುಕ್ತ ಶ್ರೀಮರಿದೇವ ಸಂಗೀತ ಸಾಂಸ್ಕೃತಿ ಕಲಾವೃಂದ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಹಯೋಗದೊಂದಿಗೆ ಸಾಂಸ್ಕೃತಿಕೋತ್ಸವ –2024 ಕಾರ್ಯಕ್ರಮದಲ್ಲಿ ಮಾತನಾಡಿದರು. ಕಲಾವಿದರಿಗೆ ವೇದಿಕೆಗಳು ಲಭಿಸಿದಷ್ಟು ಮಕ್ಕಳಲ್ಲಿ ಕಲಿಕೆಯ ಉತ್ಸಾಹ ಹೆಚ್ಚುತ್ತದೆ. ಗ್ರಾಮೀಣ ಪ್ರತಿಭಾವಂತ ಕಲಾವಿದರಿಗೆ ವೇದಿಕೆಗಳು ಹೆಚ್ಚು ದೊರೆಯುವಂತಾಗಬೇಕು ಎಂದರು.

ಗ್ರಾಪಂ ಅಧ್ಯಕ್ಷೆ ರಜಿನಿ ಷಣ್ಮುಖಗೌಡ ಅಧ್ಯಕ್ಷತೆವಹಿಸಿದ್ದರು. ಸಂಗೀತ ಶಿಕ್ಷಕರಾದ ಮಲ್ಲಿಕಾರ್ಜುನ ತುರುವನೂರು, ಗ್ರಾಪಂ ಉಪಾಧ್ಯಕ್ಷ ಹನುಮಂತಪ್ಪ, ಸದಸ್ಯರಾದ ಕೆ.ಗೋಪಾಲ್, ರೇಣುಕಮ್ಮ, ಹುಲಿರಾಜ್, ವೀರೇಶ್ ಹಿಟ್ನಾಳ್ ಕಲಾವೃಂದದ ಸಂಸ್ಥಾಪಕ ಅಧ್ಯಕ್ಷ ಅಂಗಡಿ ವಾಮದೇವ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ಕೊಪ್ಪಳ ಗವಿಮಠದ ಸ್ವರ ಸಂಚಾರ ಕಲಾತಂಡದ ಕಲಾವಿದರಿಂದ ಶಾಸ್ತ್ರೀಯ ಸಂಗೀತ ದಾಸರ ಪದಗಳು ಮತ್ತು ಸುಗುಣ ಮತ್ತು ತಂಡದಿಂದ ಭರತನಾಟ್ಯ, ಅಮೃತ ತಂಡದಿಂದ ಜಾನಪದ ನೃತ್ಯ, ಸುಮಾ ಕಾಳಘಟ್ಟ ರಿಂದ ಸುಗಮ ಸಂಗೀತ ಯಲ್ಲಪ್ಪ ಬಂಡಾರ್‌ದಾರ್ ಜಾನಪದ ಗೀತೆ, ಅಂಗಡಿ ಸಮರ್ಥ, ನವ್ಯ ಅಂಗಡಿ ಇವರಿಂದ ವಚನಗಾಯನ ಹಾಗೂ ಕಡ್ಡಿರಾಂಪುರದ ಶಾಲಾ ಮಕ್ಕಳಿಂದ ವಿವಿಧ ನೃತ್ಯ ಕಾರ್ಯಕ್ರಮಗಳು ನಡೆದವು. ಎ.ದೊಡ್ಡಬಸಪ್ಪ, ಕೆ.ಪಂಪನಗೌಡ, ನಿರ್ವಹಿಸಿದರು.

# ಎಲ್ಲಾ ಗೊತ್ತೆಂಬ ಅಹಂಮಿಕೆ ಬೇಡ

### ಜಿಲ್ಲಾ ಪ್ರಾಚಾರ್ಯರ ಸಂಘದ ಎನ್.ಸಿ. ಹವಾಲ್ದಾರ್ ಅಭಿಮತ

### ಸಮಾಜ ಶಾಸ್ತ್ರದ ಶೈಕ್ಷಣಿಕ ಕಾರ್ಯಗಾರ ಮತ್ತು ನಿವೃತ್ತರಿಗೆ ಸನ್ಮಾನ



■ ಹಂಪಿ ಟೈಮ್ಸ್ ಕೂಡ್ಲಿಗಿ

ತೆರೆದ ಹೃದಯವಂತಿಕೆಯಿಂದ ಮಾತ್ರ ಕ್ರೀಯಾಶೀಲತೆಯನ್ನು ಕಾಣಬಹುದಾಗಿದೆ ಎಂದು ಜಿಲ್ಲಾ ಪ್ರಾಚಾರ್ಯರ ಸಂಘದ ಎನ್.ಸಿ. ಹವಾಲ್ದಾರ್ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಸಮಾಜ ಶಾಸ್ತ್ರ ವೇದಿಕೆಯಿಂದ ಶನಿವಾರ ನಡೆದ ಶೈಕ್ಷಣಿಕ ಕಾರ್ಯಾಗಾರ, ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಎಲ್ಲಾ ನನಗೆ ಗೊತ್ತಿದೆ ಎಂಬ ಅಹಂಮಿಕೆಯನ್ನು ಮೊದಲು ಬಿಡಬೇಕು. ಕಠಿಣ ಪರಿಶ್ರಮದಿಂದ ದುಡಿದಾಗ ಪ್ರತಿಫಲ ತಾನಾಗಿಯೇ ಸಿಗುತ್ತದೆ. ಪ್ರತಿಯೊಬ ್ಬರಿಂದಲೂ, ಪ್ರತಿಕ್ಷಣ, ಕಲಿಯುವುದು ಇರುತ್ತದೆ. ಅದನ್ನು ತಿರಸ್ಕರಿಸಲಾಗದು. ನಮಗೆ ಕಾರ್ಯಾಗಾರದ ಅವಶ್ಯಕತೆ ಇದೆಯಾ, ಸಂಪನ್ಮೂಲ ವ್ಯಕ್ತಿಗಳಿಂದ ಕೇಳಿ ತಿಳಿಯಬೇಕಾ, ಎನ್ನುವುದು ಬಿಡಬೇಕು. ಇದೊಂದು ಶೈಕ್ಷಣಿಕ ಕಾರ್ಯಾಗಾರ ಎಲ್ಲರೂ ಇಲ್ಲಿ ಪಾಲ್ಗೊಳ್ಳುವ ಮೂಲಕ ಮುಕ್ತ ಮನಸ್ಸಿನಿಂದ ತೆರದುಕೊಂಡು, ಇನ್ನೂ ಯಾವರೀತಿ ಭೋದನೆಯ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಬಹದು, ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಸರಳ ರೀತಿಯನ್ನು ಪಠ್ಯಗಳ ವಿಷಯಗಳನ್ನು ತಿಳಿಸಬಹುದು ಇತ್ಯಾದಿ ವಿಷಯವನ್ನು ಚರ್ಚಿಸುವ ಮೂಲಕ ಕಾರ್ಯಾಗಾರಗಳು ಖಂಡಿತ ಯಶಸ್ವಿ ಯಾಗುತ್ತವೆ ಎಂದು ನಾಗರಾಜ್ ಹವಾಲ್ದಾರ್ ನೆರದಿರುವ ಸಮಾಜ ಶಾಸ್ತ್ರ, ಉಪನ್ಯಾಸಕರಿಗೆ ತಿಳಿಸಿದ ಅವರು, ಬಹಳ ತಡವಾಗಿ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದೀರಿ. ಈಗಾಗಲೇ ವಿದ್ಯಾರ್ಥಿಗಳು ಪರೀಕ್ಷೆಗಳ ಸಿದ್ಧತೆಗಳನ್ನು ನಡೆಸಿದ್ದಾರೆ. ಈ ಮೊದಲು ತಯಾರಿ ನಡೆಸಿದ್ದರೆ, ಅನುಕೂಲವಾಗುತ್ತಿತ್ತು ಎಂದರು.

ಕಾಲೇಜು ಅಭಿವೃದ್ಧಿ ಸಮಿತಿಯ ಉದಯ ಎಸ್. ಜನ್ನು ಮಾತನಾಡಿ, ಮುಂದಿನ ವರ್ಷದಲ್ಲಿ ಈ ಕಾರ್ಯಕ್ರಮವನ್ನು ಅದ್ದೂರಿ ಯಾಗಿ ನೆರವೇರಿಸುವ ಮೂಲಕ ಶೈಕ್ಷಣಿಕ ಕಾರ್ಯಾಗಾರವನ್ನು ನಡೆಸೋಣ ಎಂದು ಹೇಳಿದರು. ಜಿಲ್ಲೆಯ ಸಮಾಜ ಶಾಸ್ತ್ರ ಉಪನ್ಯಾಸಕರಗಳೆಲ್ಲರೂ ಸೇರಿರುವುದರಿಂದ, ಪಾಠ, ಪ್ರವಚನಗಳಲ್ಲಿ, ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಎದುರಿಸುವಲ್ಲಿ, ಸುಧಾರಣೆಗೆ ಕ್ರಮವಹಿಸಲು ಸಾಧ್ಯವಾಗುತ್ತದೆ ಎಂದರು.

ಪ್ರಾಚಾರ್ಯೆ ಡಾ.ಟಿ.ಕೊಟ್ರಮ್ಮ, ಸಂಪನ್ಮೂಲ ವ್ಯಕ್ತಿ ಸಂಗಮೇಶ್ ಎಂ ಕಮತರ, ಬಳ್ಳಾರಿ ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಡಾ.ಎಂ. ರಾಜಣ್ಣ, ಬಿ.ಪಿ. ತಿಪ್ಪೇಸ್ವಾಮಿ, ಗೌಡರ ಸೋಮಶೇಖರಪ್ಪ ಮಾತನಾಡಿದರು. ಟಿ. ಹಾಲೇಶ್ ಪ್ರಾಸ್ತಾವಿಕವಾಗಿ ಮಾತನಾಢಿದರು. ಟಿ. ದೇವಪ್ಪ ನೆರವೇರಿಸಿದರು. ಜೆ.ವೆಂಕಟೇಶ, ಆರ್. ಹನುಮಂತಾಚಾರ್, ನಾಗರಾಜ್ ಕೊಟ್ರಪ್ಪನವರ್ ಸೇರಿದಂತೆ ವಿದ್ಯಾರ್ಥಿಗಳು, ಜಿಲ್ಲೆಯಿಂದ ಆಗಮಿಸಿದ ಸಮಾಜಶಾಸ್ತ್ರದ ಉಪನ್ಯಾಸಕರು ಇದ್ದರು.

# ಜಿಲ್ಲೆಗೆ ನ್ಯಾಯಿಕ ಸದಸ್ಯ ಎಸ್. ಕೆ. ವಂಟಿಗೋಡಿ

ಹಂಪಿ ಟೈಮ್ಸ್ ಕೊಪ್ಪಳ.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಗೌರವಾನ್ವಿತ ನ್ಯಾಯಿಕ ಸದಸ್ಯರಾದ ಎಸ್. ಕೆ. ವಂಟಿಗೋಡಿ ಅವರು ನವೆಂಬರ್. 25 ರಂದು ಕೊಪ್ಪಳ ಜಿಲ್ಲಾ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಅಂದು ಬೆಳಗ್ಗೆ ಹುಬ್ಬಳ್ಳಿಯಿಂದ ಹೊರಟು 10 ಗಂಟೆಗೆ ಗಂಗಾವತಿಗೆ ಆಗಮಿಸಿ ಗಂಗಾವತಿ ಸರ್ಕ್ಯೂಟ್ ಹೌಸನಲ್ಲಿ ಇರಲಿದ್ದಾರೆ. ಗೌರವಾನ್ವಿತ ಸದಸ್ಯರು ಸ್ವಯಂ ಪ್ರಕರಣ ಎಚ್ ಆರ್ ಸಿ ನಂಬರ್ 3877/10/24/2024(FB) ಸಂಬಂಧ ವಾಗಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿಗೆ ಭೇಟಿ ನೀಡಲಿದ್ದಾರೆ. ಅಂದು ಮಧ್ಯಾಹ್ನ 2:30 ರಿಂದ ಸಂಜೆ 5 ಗಂಟೆಯವರೆಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕೊಪ್ಪಳ ನಗರದ ಸರಕಾರಿ ಅತಿಥಿ ಗೃಹದಲ್ಲಿ ಸಭೆ ನಡೆಸಿ ವಾಸ್ತವ್ಯ. ಮಂಗಳವಾರ ಬೆಳಿಗ್ಗೆ 10:30 ಗಂಟೆಗೆ ಕೊಪ್ಪಳ ಸರಕಾರಿ ಅತಿಥಿ ಗೃಹದಿಂದ ಬೆಂಗಳೂರಿಗೆ ರಸ್ತೆಯ ಮೂಲಕ ಪ್ರಯಾಣ ಬೆಳೆಸಲಿದ್ದಾರೆ.

# ನಿಸರ್ಗದ ಬಗ್ಗೆ ಕುತೂಹಲವಿದ್ದರೆ ವಿಜ್ಞಾನಿಗಳಾಗಲು ಸಾಧ್ಯ

ಮೊದಲ ಪುಟದಿಂದ

ವಿಜ್ಞಾನ ಎಂಬುದು ಸತ್ಯವಾದ ಮತ್ತು ಸುಂದರವಾದ ವಿಷಯವಾಗಿದೆ. ವಿದ್ಯಾರ್ಥಿಗಳು ಕೇವಲ ಪಠ್ಯಕ್ರಮಕ್ಕೆ ಸೀಮಿತವಾಗದೇ ಅದರಾಚೆಗೂ ವ್ಯಾಪಕ ಕಲಿಕೆಗೆ ಒತ್ತು ನೀಡುವತ್ತ ಗಮನ ಹರಿಸಬೇಕು ಹಾಗೂ ಪ್ರಶ್ನಿಸುವ ಗುಣ ಬೆಳೆಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳನ್ನು ವೈಜ್ಞಾನಿಕ ಚಿಂತನೆಗೆ ಪ್ರಚೋದಿಸುವ ಹಾಗೂ ಮೂಲ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವಲ್ಲಿ ಉಪನ್ಯಾಸಕರ ಪಾತ್ರ ಮುಖ್ಯವಾಗಿದೆ ಎಂದರು. ಕೇವಲ ಅಂಕಗಳ ಮಾನದಂಡದಿಂದ ವಿದ್ಯಾರ್ಥಿಗಳ ಜಾಣತನ ಅಳೆಯಬಾರದು ಅವರಲ್ಲಿ ಅಡಗಿರುವ ಆಸಕ್ತಿಗೆ ತಕ್ಕಂತೆ ಪ್ರೋತ್ಸಾಹಿಸುವ ನಿಟ್ಟಿನತ್ತ ಪಾಲಕರು ಹಾಗೂ ಶಿಕ್ಷಕರು ಮುಂದಾಗಬೇಕೆಂದರು.

ಯಂತ್ರಗಳ ಸಹಾಯದಿಂದ ಜಗತ್ತು ಮುನ್ನಡೆಯುವುದರ ಜೊತೆಯಲ್ಲಿ ವಯಸ್ಸನ್ನು ತಡೆಗಟ್ಟುವಂತಹ ತಂತ್ರಜ್ಞಾನ ಹಾಗೂ ಸಾವನ್ನು ಗೆಲ್ಲುವಂತಹ ದಿನಗಳು ಬರುವುದರಿಂದ ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಜಗತ್ತು ಹೊಂದಿಕೊಳ್ಳುವುದು ಅನಿವಾರ್ಯವಾಗುತ್ತದೆ ಎಂದರು.

ಪರೀಕ್ಷಾ ರಹಿತ ಶಿಕ್ಷಣ ವ್ಯವಸ್ಥೆ ಕಲ್ಪಿಸಿದರೆ ಮಕ್ಕಳು ಒತ್ತಡದಿಂದ ಪಾರಾಗಿ ಜೀವನದಲ್ಲಿ ತಮಗಿಷ್ಟವಾದ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು. ವಿದ್ಯಾರ್ಥಿಗಳು ತಮ್ಮ ಭವಿಷ್ಯದ ದಿನಗಳನ್ನು ತಾವೇ ರೂಪಿಸಿಕೊಳ್ಳಬೇಕೇ ವಿನಃ ಇನ್ನೊಬ್ಬರ ನೆರವಿನಿಂದ ಸಾಧ್ಯವಿಲ್ಲ ಎಂಬುದನ್ನು ಮನದಟ್ಟು ಮಾಡಿಕೊಂಡರೆ ಜೀವನದಲ್ಲಿ ಗುರಿ ಮುಟ್ಟಲು ಸಾಧ್ಯ ಎಂದರು,

ಪಾಲಕರ ಆಕಾಂಕ್ಷೆಗಳನ್ನು ಈಡೇರಿಸುವುದರ ಜೊತೆಯಲ್ಲಿ ಸಂಸ್ಕಾರ ಹಾಗೂ ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡಾಗ ವಿದ್ಯಾರ್ಥಿಗಳ ಬದುಕು ಅರ್ಥಪೂರ್ಣವಾಗುತ್ತದೆ ಎಂದರು.

ಉಪನ್ಯಾಸಕ ಸಿದ್ದೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿ ಭಾರತವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ದಾಪುಗಾಲು ಇಡುವಲ್ಲಿ ವಿಜ್ಞಾನಿಗಳ ಕೊಡುಗೆ ಅಪಾರವಾಗಿದೆ ಎಂದರು.

ಈ ಸಂದರ್ಭದಲ್ಲಿ ವಿಜ್ಞಾನ ಸಮಿತಿ ಸದಸ್ಯ ಅಲಬೂರು ಶಾಂತಕುಮಾರ್, ರಾಮಣ್ಣ, ನಾಗರಾಜ್ ಬಂಜಾರ್, ವಿನಯ್ ಮುದೇನೂರ್, ಉಪನ್ಯಾಸಕರಾದ ಸಿ.ಬಸವರಾಜ್, ಕೆ.ಎಂ. ರೇಣುಕಾಸ್ವಾಮಿ, ಆರಾಧ್ಯ ಸ್ವಾಮಿ, ಚೇತನ್ ಚೌವಾಣ್, ಡಾ.ವಿಜಯಕುಮಾರ್,ಕೆ.ಕೊಟ್ರೇಶ್,ಶಿವಪ್ರಕಾಶ್ ಮುಂತಾದವರು ಪಾಲ್ಗೊಂಡಿದ್ದರು.

# ಹುದ್ದೆಗಳ ಅನುಮತಿಗೆ ಸರ್ಕಾರ ನಿರ್ಲಕ್ಷ್ಯ

### ಮಾಜಿ ಎಂಎಲ್ಸಿ ಶರಣಪ್ಪ ಮಟ್ಟೂರು ಬೇಸರ । ಮಲತಾಯಿ ಧೋರಣೆ ಕೈಬಿಡಲಿ

■ ಹಂಪಿ ಟೈಮ್ಸ್ ಹರಪನಹಳ್ಳಿ

ಬಹು ವರ್ಷಗಳಿಂದ ಖಾಲಿ ಇರುವ ಹುದ್ದೆಗಳ ಅನುಮತಿಗೆ ಸರಕಾರವು ನಿರ್ಲಕ್ಷಿಸಿದೆ ಎಂದು ಮಾಜಿ ಎಂಎಲ್ಸಿ ಶರಣಪ್ಪ ಮಟ್ಟೂರು ಬೇಸರ್ ವ್ಯಕ್ತಪಡಿಸಿದರು.

ಪಟ್ಟಣದ ಟಿಎಂಎಇ ಸಂಸ್ಥೆಯ ಶಿಕ್ಷಣ ಮಹಾ ವಿದ್ಯಾಲಯಕ್ಕೆ ಶನಿವಾರ ಮಾಜಿ ಎಂಎಲ್ಸಿ ಶರಣಪ್ಪ ಮಟ್ಟೂರು ಇವರು ಕಾಲೇಜಿಗೆ ಭೇಟಿ ನೀಡಿ ಮಾತನಾಡಿದರು. ಈಗಾಗಲೇ ಪ್ರಾಥಮಿಕ, ಪ್ರೌಢ, ಪಿಯು ಮತ್ತು ಪದವಿ ಕಾಲೇಜುಗಳಿಗೆ ಡಿ.31–12–2020 ರವರೆಗೆ ತೆರವಾಗಿರವ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡಿದೆ. ಸರಕಾರದಲ್ಲಿ ಈ ಮಲತಾಯಿ ಧೋರಣೆಯನ್ನು ಖಂಡಿಸಿ ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಸಚಿವರು ಮತ್ತು ಸರಕಾರದ ಮಟ್ಟದಲ್ಲಿ ಶಿಕ್ಷಕರ ಶಿಕ್ಷಣವನ್ನು ನಿರ್ಲಕ್ಷಿಸಿದ ವಿಷಯವನ್ನು ಬಹು ಗಂಭೀರವಾಗಿ ಚರ್ಚಿಸುವುದಾಗಿ ಭರವಸೆ ನೀಡಿದರು.



ಮಹಾವಿದ್ಯಾಲಯದ ಮುಖ್ಯಸ್ಥರಾದ ಟಿ. ಎಂ.ರಾಜಶೇಖರ್ ಮಾತನಾಡಿ, ಹರಪನಹಳ್ಳಿ ಅನುದಾನಿತ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈಗಾಗಲೇ 08 ಉಪಾನ್ಯಸಕರು ನಿವೃತ್ತಿ ಹೊಂದಿ ಕೇವಲ ಇಬ್ಬರು ಮಾತ್ರ ಅನುದಾನಿತ ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಹ ಕಲ್ಯಾಣ ಕರ್ನಾಟಕಕ್ಕೆ ಸೇರಿದ್ದರೂ ಸಹ ಎಷ್ಟೇ ಬಾರಿ ಸರಕಾರಕ್ಕೆ ಮನವಿ ಮಾಡಿಕೊಂಡಿದ್ದರು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಅಧಿಕಾರಿಗಳು ಗಮನ ಹರಿಸದೇ ಇರುವುದು ಅತ್ಯಂತ ವಿಷದಾನಿಯ ಅಳಲು ತೋಡಿಕೊಂಡರು.

ಈ ವೇಳೆ ಮಹಾವಿದ್ಯಾಲಯದ ಮುಖ್ಯಸ್ಥರಾದ ಟಿ.ಎಂ.ರಾಜಶೇಖರ್, ಬಿ. ಎಡ್. ಕಾಲೇಜಿನ ಪ್ರಾಂಶುಪಾಲರಾದ ಡಾ.ಜಿ.ಎಂ.ವಿಜಯಲಕ್ಷ್ಮೀ, ಉಪನ್ಯಾಸಕರಾದ ಡಾ.ಸಿ.ಎಂ.ವೀರೇಶ್, ಲತಾ, ಮೀನಾಕ್ಷೀ ಸೇರಿದಂತೆ ಅನೇಕರು ಹಾಜರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE AUIDIENCE

**Classified Advertisements**
Examples: Job postings, Real estate listings , Matrimonial ads, Lost and found, Services (e.g., tutors, plumbers)

**Display Advertisements**
Examples: Brand promotions, Product launches, Corporate announcements

**Public Notices and Announcements**
Examples: Tender notices, Government announcements, Legal notices, Obituaries

**Recruitment Advertisements**
Examples: Company job openings, Walk-in interviews, Recruitment drives

**Health and Wellness Advertisements**
Examples: Hospitals or clinics, Medical equipment, Health supplements

**Educational Advertisements**
Examples: College admissions, Coaching center promotions, Training programs

**Event Advertisements**
Examples: Cultural programs, Exhibitions, Concerts or festivals

**Retail Advertisements**
Examples: Sales or discounts, New store openings

**Entertainment Advertisements**
Examples: Movie releases, TV show promotions, Theater events

**Political Advertisements**
Campaigns or announcements related to political parties or candidates.

**Real Estate Advertisements**
Ads for buying, selling, or renting property.

**Matrimonial Advertisements**
Personal ads for seeking marriage alliances. Examples: Bride or groom profiles, Community-specific ads

**Product Advertisements**
Examples: Electronics, Automobiles, FMCG products

contact for more information
M: 94 48 63 30 38
Email:- hampitimes@gmail.com